ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನಿನ್ನೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದವರೊಬ್ಬರು, ಹೈಗ್ರೌಂಡ್ಸ್ ಪೋಲೀಸ್ ಸ್ಟೇಷನ್‌ವ್ಯಾಪ್ತಿಯಲ್ಲಿ, ಆರ್.ಸಿ.ಕಾಲೇಜ್ ಹತ್ತಿರ, ಮಧ್ಯಾಹ್ನ ಒಂದೂವರೆ ಗಂಟೆ ಸಮಯದಲ್ಲಿ 10 ಸಾವಿರ ರೂಪಾಯಿ ದರೋಡೆಯಾಗಿದೆ ಎಂದು ಹೇಳಿದ್ದಾರೆ. ಇದು ತಮ್ಮ ಗಮನಕ್ಕೂ ಬಂದಿರಬಹುದು, ಸರ್ಕಾರದ ಗಮನಕ್ಕೂ ಈ ವಿಚಾರ ಬಂದಿದೆ. ಈ ಬಗ್ಗೆ ಪೋಲೀಸ್ ಸ್ಟೇಷನ್‌ನಲ್ಲಿ ದೂರು ದಾಖಲಾಗಿದೆ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ (ಮು.ವ)

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯವನ್ನು ನಾನು ವಿರೋಧಿಸುತ್ತಾ, ಈ ಸರ್ಕಾರ ಸದನದ ಒಳಗೆ ಮತ್ತು ಸದನದ ಹೊರಗೆ ಹೇಳತಕ್ಕಂಥ ಮಾತುಗಳು ಒಂದಕ್ಕೊಂದು ಸಂಬಂಧ ಇಲ್ಲ. ಹೊರಗೆ ಹೇಳಿದಂಥ ಮಾತು, ಈ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುತ್ತೇವೆ ಎಂಬುದಾಗಿ ಹಾಗೂ ಇಲ್ಲಿ ಕೊಟ್ಟಿರುವುದನ್ನು ನೋಡಿದರೆ, ಸಂದಿಗ್ಧತೆ ಉಂಟಾಗುತ್ತದೆ. ಸಾಲ ಮನ್ನಾ ಮಾಡುವ ವಿಚಾರದಲ್ಲಿ ರೈತರಿಗೆ ಯಾವುದೇ ಪ್ರಯೋಜನ ಆಗುತ್ತಾ ಇಲ್ಲವೆಂದು ಇದ್ದರೂ ಸಹಿತ, ಕರಾರುರಹಿತವಾಗಿ 10 ಸಾವಿರದೊಳಗಿನ ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳಿದ್ದರೂ ಸಹಿತ ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಜರುಗಿಸಿಲ್ಲ ಮತ್ತು ಹಿಂದಿನ ಸರ್ಕಾರ ಮಾಡಿದಂಥ 7 ರೂಪಾಯಿ ರಿಯಾಯಿತಿ ಬಡ್ಡಿಯನ್ನೂ ಸಹ ಈ ಸರ್ಕಾರ ತೆಗೆದುಹಾಕಿದೆ. ಅಲ್ಲದೆ ವಿಫಲ ಬಾವಿಗಳಿಗೆ ಪರಿಹಾರ ಕೊಡತಕ್ಕಂಥಾದ್ದನ್ನೂ ಕೂಡ ತೆಗೆದು ಹಾಕಿದೆ. ಈ ರೀತಿ, ಈ ಸರ್ಕಾರ ರೈತ ವಿರೋಧಿ ನೀತಿಯನ್ನು ಕೈಗೊಂಡಿದೆ. ಈಗಲಾದರೂ ಈ ಸರ್ಕಾರ ಬರಗಾಲ ಪೀಡಿತಕ್ಕೆ ಒಳಗಾದ ರೈತರ ಸಾಲ ಮನ್ನಾ ಮಾಡುವ ಯೋಚನೆ ಮಾಡಬೇಕೆಂದು ನಾನು ಸೂಚಿಸುತ್ತಿದ್ದೇನೆ. ಹಿಂದಿನ ಸರ್ಕಾರ ರೈತರು ಪಡೆಯುವ 15 ಸಾವಿರದವರೆಗಿನ ಸಾಲದ ಮೇಲೆ ಯಾವುದೇ ಸ್ಟಾಂಪ್ ಡ್ಯೂಟಿಯನ್ನು ಹಾಕುತ್ತಾ ಇರಲಿಲ್ಲ. ಈಗಿನ ಸರ್ಕಾರ, ರೈತರು ಈ ಬರಗಾಲದಲ್ಲಿ ಪಡೆಯತಕ್ಕ ಸಾಲದ ಮೇಲೆ, ಭಾರವಾದ ಸ್ಟಾಂಪ್ ಡ್ಯೂಟಿಯನ್ನು ಹಾಕುತ್ತಿದೆ. ಒಂದು ಸಾವಿರ ರೂಪಾಯಿ ಸಾಲ ಮಾಡತಕ್ಕಂಥ ರೈತ 50 ರೂಪಾಯಿ ಸ್ಟಾಂಪ್ ಡ್ಯೂಟಿ ತುಂಬಬೇಕು. ಒಂದು ಬೋರ್ ಅಥವಾ ಪಂಪ್‌ಸೆಟ್ ಹಾಕಿದರೆ 50 ಸಾವಿರ ರೂಪಾಯಿ ಸಾಲವಾಗುತ್ತದೆ, ಅದಕ್ಕೆ ನಾಲ್ಕಾರು ಸಾವಿರ ರೂಪಾಯಿ ಸ್ಟಾಂಪ್ ಡ್ಯೂಟಿ ಕೊಡುವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡಿದೆ. ಈ ರೀತಿ ರೈತರನ್ನು ಪ್ರತ್ಯೆಕ್ಷವಾಗಿ ಶೋಷಣೆ ಮಾಡುವಂಥ ಒಂದು ನೀತಿಯನ್ನು ಸರ್ಕಾರ ಅನುಸರಿಸುತ್ತಿದೆ. ಎಂಬುದನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ. ರೈತರ ಸಾಲ ಮನ್ನಾ ಮಾಡಲಿಲ್ಲ, ಬಡ್ಡಿಯನ್ನು ಮನ್ನಾ ಮಾಡಲಿಲ್ಲ, 7 ರೂಪಾಯಿ ರಿಯಾಯಿತಿ ಬಡ್ಡಿ ದರವನ್ನು ತೆಗೆದುಹಾಕಿದಿರಿ, ವಿಫಲ ಬಾವಿಗಳಿಗೆ ಕೊಡತಕ್ಕಂಥ ಸಹಾಯಧನವನ್ನು ತೆಗೆದು ಹಾಕಿದಿರಿ. ಹಳ್ಳಿಗಳೇ ಭಾರತದ ಜೀವಾಳ ಎಂದು ಹೇಳಿರುವುದು ಕರ್ನಾಟಕಕ್ಕೂ ಅನ್ವಯವಾಗುತ್ತದೆ. " ರೈತರು ನಮ್ಮ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬು ಎಂಬ ಅಂಶವನ್ನು ಮನಗಂಡು, ನಮ್ಮ ಸರ್ಕಾರ ರೈತರ ಬಗ್ಗೆ ಎಲ್ಲಾ ಕಳಕಳಿಯನ್ನು ಹೊಂದಿದೆ" ಎಂದು ಹೇಳಿದ್ದಾರೆ. ಅಂದರೆ, ರೈತರೇ ಈ ದೇಶದ ಬೆನ್ನೆಲುಬು,ರಾಜ್ಯದ ಸಂಪತ್ತನ್ನು ಉತ್ಪನ್ನ ಮಾಡತಕ್ಕಂಥ ರೈತರ ಬಗ್ಗೆ ಈ ಸರ್ಕಾರದ ತಳಿದಿರತಕ್ಕ ವ್ಯವಸ್ಥೆ, ಕಾಳಜಿ, ನೀತಿ ಏನು ಎನ್ನುವುದನ್ನು ಇಲ್ಲಿ ಗಮನಿಸಬೇಕು. ಇವತ್ತು ರೈತರ

ಬಗ್ಗೆ ಚಕಾರ ಶಬ್ದ ಇಲ್ಲ. ರೈತರ ಸಾಲ ಮನ್ನಾ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಆದರೆ ರಾಜ್ಯಪಾಲರ ಭಾಷಣದಲ್ಲಿ ನೋಡಿದರೆ, ಈ ಅಂಶ ಒಳಗೊಂಡಿಲ್ಲ. ಮಾರ್ಚಿ 31ರ ವರೆಗೆ ರಾಜ್ಯದ ರೈತರ ಸಾಲ ವಸೂಲಾತಿಯನ್ನು.....

ಶ್ರೀ ಬಸವರಾಜ ರಾಯರೆಡ್ಡಿ : ಒಬ್ಬ ಮಂತ್ರಿಗಳೂ ಗಮನ ಕೊಡುತ್ತಾ ಇಲ್ಲ. ಇದಕ್ಕೆ ಉತ್ತರ ಯಾರು ಕೊಡುತ್ತಾರೆ. ಯಾರೂ ಬರೆದುಕೊಳ್ಳುತ್ತಾ ಇಲ್ಲ. ಬೇರೆ ಮಂತ್ರಿಗಳನ್ನಾದರೂ ಕರೆಸಿ. ವರದಿಗಾರರು ತೆಗೆದುಕೊಳ್ಳುತ್ತಾರೆಂದು ಹೇಳಬಹುದು, ಅದಲ್ಲ ದಯಮಾಡಿ ಸಂಬಂಧಪಟ್ಟ ಮಂತ್ರಿಗಳನ್ನು ಕರೆಸುವುದು ಒಳ್ಳೆಯದು.

ಗೃಹಖಾತೆ ಸಚಿವರು ಇದ್ದಾರೆ, ತಮ್ಮ ಬಗ್ಗೆ ನಾನು ಹೇಳುತ್ತಿಲ್ಲ. ಬೇರೆ ಯಾರಾದರೂ ಮಂತ್ರಿಗಳನ್ನು ಕರೆಸುವುದು ಒಳ್ಳೆಯದು.

ಚೇರ್‌ಮನ್ : ಅವರದ್ದು ಸಂಯುಕ್ತ ಜವಾಬ್ದಾರಿ, ಅವರು ನೋಡಿಕೊಳ್ಳುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಇಬ್ಬರು ಅಥವಾ ಒಂದೂವರೆ ಸಚಿವರು ಇದ್ದಾರೆ.

ಚೇರ್‌ಮನ್ : ಗೃಹಸಚಿವರನ್ನು ಅಂಡರ್ ಎಸ್ಟಿಮೇಟ್ ಮಾಡಬೇಡಿ.

ಶ್ರೀ ಬಿ.ಪೆಚ್. ಬನ್ನಿಕೋಡ್ : ತಮ್ಮ ಮುಖಾಂತರ ಸರಕಾರಕ್ಕೆ ಸಲಹೆ ಮಾಡುತ್ತಿದ್ದೇನೆ. ಈ ದೇಶದ ಸಂಪತ್ತನ್ನು ಉತ್ಪಾದನೆ ಮಾಡತಕ್ಕ ರೈತ ಪಡೆಯತಕ್ಕ ಸಾಲದ ಮೇಲೆ 50 ಸಾವಿರದ ವರೆಗೆ ಸ್ಟಾಂಪ್ ಡ್ಯೂಟಿ ರದ್ದು ಮಾಡಬೇಕು. ಸ್ಟಾಂಪ್ ಡ್ಯೂಟಿಯನ್ನು ವಸೂಲಿ ಮಾಡಬಾರದು ಎಂದು ಸೂಚಿಸುತ್ತಿದ್ದೇನೆ. ಈ ಬರಗಾಲ ಪರಿಸ್ಥಿತಿಯಲ್ಲಿ ರೈತನ ಸಾಲ ವಸೂಲಿ ಮಾಡಬಾರದು. ಮಾರ್ಚ್ 31ರ ನಂತರ ಬಲಾತ್ಕಾರ ಸಾಲ ವಸೂಲಿ ಪ್ರಾರಂಭಿಸುತ್ತೇವೆಂದು ಮಾನ್ಯ ಸಹಕಾರ ಸಚಿವರು ಈ ಸದನದಲ್ಲಿ ಹೇಳಿದ್ದಾರೆ. ಬರಗಾಲ ಇದೆ ಎಂದು ಸರಕಾರ ಒಪ್ಪುತ್ತಿದೆ. ಕುಡಿಯುವ ನೀರು ಇಲ್ಲದೆ ಇರತಕ್ಕ ಪರಿಸ್ಥಿತಿಯಲ್ಲಿ ಬೆಳೆ ಬಾರದೆ ಇರತಕ್ಕ ಪರಿಸ್ಥಿತಿಯಲ್ಲಿ ಇವತ್ತು ರೈತ ಇದ್ದಾನೆ. ಇಂತಹ ಪರಿಸ್ಥಿತಿಯಲ್ಲೂ ಮಾರ್ಚ್ 31ರ ನಂತರ ಬಲಾತ್ಕಾರವಾಗಿ ಸಾಲ ವಸೂಲಿ ಸರಕಾರ ಮಾಡುತ್ತದೆಂದರೆ ಇದಕ್ಕಿಂತ ಮತ್ತೊಂದು ಇಲ್ಲ. ರೈತರ ಪರವಾಗಿ ಈ ಸರಕಾರಕ್ಕೆ ನಿಜವಾಗಿ ಯಾವ ಕಾಳಜಿ ಇಲ್ಲ, ರೈತನನ್ನು ಸಂಪೂರ್ಣವಾಗಿ ಸದೆ ಬಡಿಯತಕ್ಕ ಪ್ರಯತ್ನ ಸರಕಾರದಿಂದ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ಈ ಸದನದ ಮೂಲಕ ಹೇಳಬೇಕಾಗುತ್ತದೆ. ಇನ್ನು ಸರಕಾರ ಮಾಡಿರುವಂತಹ ಸಾಧನೆಗಳಲ್ಲಿ, ಕೃಷಿಯೇತರ ಉತ್ಪನ್ನ 12 ಸಾವಿರ ರೂಪಾಯಿಗಿಂತ ಹೆಚ್ಚಿದ್ದರೆ ರೈತ ಜಮೀನನ್ನು ಖರೀದಿ ಮಾಡುವುದಕ್ಕೆ ಆಗುವುದಿಲ್ಲ ಎಂಬ ಕಾನೂನನ್ನು ತೆಗೆದು ಹಾಕಿದ್ದೇವೆ. 50 ಸಾವಿರ ರೂಪಾಯಿ ಕೃಷಿಯೇತರ ಉತ್ಪನ್ನ ಇದ್ದರೂ ಖರೀದಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ರಾಜ್ಯದಲ್ಲಿ ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಕೊಡಿರಿ ಎಂದು ಅನೇಕ ಸಲ ಸರಕಾರವನ್ನೂ ಕೇಳಿದೆವು, ಆದರೆ ಕೊಡಲಿಲ್ಲ. ಇಲ್ಲಿಯವರೆಗೆ ಆದಂಥ ಅನೇಕ ವ್ಯವಹಾರಗಳ ಬಗ್ಗೆ ಕೋರ್ಟುಗಳಲ್ಲಿ, ಕಛೇರಿಗಳಲ್ಲಿ ಕೇಸುಗಳು ಪೆಂಡಿಂಗ್ ಇವೆ. ಇದನ್ನು ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡದಿರುವುದರಿಂದ ಜನ ಕೋರ್ಟಿಗೆ ಎಡತಾಕುತ್ತಿದ್ದಾರೆ. ಸೆಕ್ಷನ್ 79(ಎ) ಪ್ರಕಾರ 50ಸಾವಿರ ರೂಪಾಯಿಗಳವರೆಗೆ ಕೃಷಿಯೇತರ ಉತ್ಪನ್ನ ಇದ್ದರೂ ಸಹ ಆ ಜಮೀನನ್ನು ಖರೀದಿ ಮಾಡಲಿಕ್ಕೆ ಅನುಮತಿಯನ್ನು ರಿಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡಬೇಕೆಂದು ತಮ್ಮ ಮೂಲಕ ಸರಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಮತ್ತೆ ಈಗಾಗಲೇ ಅನೇಕ ಸ್ನೇಹಿತರು ಮಾನ್ಯ ಮುಖ್ಯಮಂತ್ರಿಯವರ ಬಳಿಯಲ್ಲಿ ಒಂದು ಲಕ್ಷ ಇಪ್ಪತ್ತುಸಾವಿರ ಫೈಲ್‌ಗಳು ಬಾಕಿ ಇವೆ ಎಂದು ಹೇಳಿದ್ದಾರೆ. ಪಂಚ ಸೂತ್ರಗಳನ್ನು ಹೇಳುವಂತಹ ಮುಖ್ಯಮಂತ್ರಿಗಳ ಹತ್ತಿರ, ರಾಜ್ಯದ ಅಡಳಿತದ

ಶುದ್ಧೀಕರಣಕ್ಕಾಗಿ ಹೊರಟ ಮುಖ್ಯ ಮಂತ್ರಿಗಳ ಹತ್ತಿರ ಇಷ್ಟೊಂದು ಫೈಲ್‌ಗಳು ಇದ್ದರೆ, ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂದು ಹೇಳಿದಹಾಗೆ ಯಾವರೀತಿ ಆಡಳಿತ ಶುದ್ಧೀಕರಣಮಾಡಬಹುದೆಂಬುದನ್ನು ನಾವು ಗಮನಿಸಬೇಕಾಗಿದೆ. ಇದು ಸಾಧ್ಯವೇ? ಯಾವ ಮಂತ್ರಿ ತನ್ನ ಆಡಳಿತವನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯ ಇಲ್ಲ, ತನ್ನನ್ನು ತಾನು ಆಡಳಿತಕ್ಕೆ ಅರ್ಪಿಸಿಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದಾಗ ರಾಜ್ಯದ ಆಡಳಿತವನ್ನು ಶುದ್ಧೀಕರಣ ಮಾಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ಗಮನಿಸಬೇಕಾಗಿದೆ. ಇನ್ನು ಮಂತ್ರಿಮಂಡಲ ವಿಸ್ತರಣೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಬೇಗ ಅದನ್ನು ಮಾಡಿ, ಫೈಲುಗಳನ್ನು ಕಳುಹಿಸಿಕೊಟ್ಟರೆ, ಸಂಬಂಧಪಟ್ಟ ಸಚಿವರು ಅದನ್ನು ವಿಲೇವಾರಿ ಮಾಡುವುದಕ್ಕೆ, ರಾಜ್ಯದ ಜನತೆಯ ಕೆಲಸ ಕಾರ್ಯಗಳನ್ನು ಆದಷ್ಟು ಬೇಗ ಪೂರೈಸುವುದಕ್ಕೆ ಅನುಕೂಲವಾದೀತು ಎಂದು ಹೇಳುತ್ತೇನೆ.

ಶ್ರೀ ಎಂ. ಮಹದೇವ್ : ಬನ್ನಿಕೋಡ್‌ರವರೇ, ಮಂತ್ರಿಮಂಡಲ ವಿಸ್ತರಣೆ ಆಗದಿರುವುದರಿಂದ ಏನು ತೊಂದರೆಯಾಗಿದೆ, ಕೆಲಸಗಳು ನಡೆಯುತ್ತಿವೆಯಲ್ಲ.

ಶ್ರೀ ಬಸವರಾಜ ರಾಯಿರೆಡ್ಡಿ : ಮಹದೇವ್‌ರವರು ಮಂತ್ರಿಯಾಗಲಿ ಎಂಬುದು ನಮ್ಮ ಆಸೆ.

ಶ್ರೀ ಎಂ. ಮಹದೇವ್ : ನಮ್ಮ ಸ್ನೇಹಿತರ ಅಪೇಕ್ಷೆ ಇದ್ದರೆ ಹಾಗೇ ಆಗಲಿ.

ಶ್ರೀ ವಾಟಾಳ್ ನಾಗರಾಜ್ : ಮಹದೇವ್‌ರವರು, ಕಾಳಮರೀಗೌಡರು, ಮತ್ತು ಚಿಕ್ಕೇಗೌಡರ ಬಗ್ಗೆ ನಾವು ವಾದ ಮಾಡುತ್ತಿದ್ದೇವೆ. ಅವರು ಕೇಳುವುದಿಲ್ಲ. ಮೂವರೂ ಒಟ್ಟಿಗೆ ಕುಳಿತುಕೊಂಡು ಮಾತನಾಡುತ್ತಿದ್ದಾರೆ. ಅವರ ಬಗ್ಗೆ ವಾದ ಮಾಡಿದರೂ ಅವರು ಕೇಳುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಮ್ಮ ಸ್ನೇಹಿತರ ಅಪೇಕ್ಷೆಯನ್ನು ನಾನು ಜನರಲ್ ಆಗಿ ಹೇಳಿದೆ, ನಿಶ್ಚಿತವಾಗಿ ನೇರವಾದ ಮಾತನ್ನು ಹೇಳಲಿಲ್ಲ. ಅದಕ್ಕೆ ನಿಮ್ಮ ಅಪೇಕ್ಷಣೆ ಇದೆ ಎಂದು ಕಾಣುತ್ತಿದೆ.

ಈಗ ಇರತಕ್ಕಂಥ ಆಡಳಿತ ನಿಷ್ಕ್ರಿಯ ಆಡಳಿತ. ಸರ್ಕಾರ ಯಾವುದೇ ಒಂದು ಆಡಳಿತದಲ್ಲೂ ದಕ್ಷತೆಯನ್ನು ತೋರಿಸಿಲ್ಲ. ಸರ್ಕಾರ ನಿಷ್ಕ್ರಿಯವಾಗಿದೆ. ಆದ್ದರಿಂದ ಸುಧಾರಣೆ ಮಾಡುತ್ತೇವೆಂದು ಹೇಳುವ ಮಾತು ಕೇವಲ ಬೂಟಾಟಿಕೆ ಮಾತು, ಇದು ಜನತೆಯ ಕಣ್ಣೊರೆಸುವಂತಹ ಮಾತು ಎಂದು ನಾನು ತಮಗೆ ಹೇಳಬಯಸುತ್ತೇನೆ. ಇನ್ನು ನೀರಾವರಿ ಬಗ್ಗೆ ಹೇಳುವುದಾದರೆ ಸಣ್ಣ ನೀರಾವರಿ ದೊಡ್ಡ ನೀರಾವರಿ, ಏತ ನೀರಾವರಿ ಮುಂತಾದ ಎಲ್ಲಾ ನೀರಾವರಿ ಯೋಜನೆಗಳಿಗೆ ನಾವು ಹೆಚ್ಚು ಆದ್ಯತೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಬಿಟ್ಟರೆ ಬೇರೇನೂ ಇಲ್ಲ. ದೊಡ್ಡ ನೀರಾವರಿಗೆ ಇಷ್ಟು ಹಣ ಇಟ್ಟಿದ್ದೇವೆ ,ಸಣ್ಣ ನೀರಾವರಿಗೆ ಇಷ್ಟು ಹಣ ಇಟ್ಟಿದ್ದೇವೆ, ಏತ ನೀರಾವರಿ ಯೋಜನೆಗೆ ಇಷ್ಟು ಹಣ ಇಟ್ಟಿದ್ದೇವೆ ಎನ್ನುವ ಮಾತನ್ನು ಎಲ್ಲೂ ಹೇಳಿಲ್ಲ ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವ ರೀತಿ ಅವರ ಮನಸ್ಸಿನಲ್ಲಿ ಈ ನೀರನ್ನು ಸದುಪಯೋಗ ಮಾಡಿಕೊಳ್ಳತಕ್ಕಂಥ ಯೋಜನೆ ಇದೆ ಎನ್ನುವುದು ಇಲ್ಲ. ಅವರ ಕಾರ್ಯ ವೈಖರಿ ಬಗ್ಗೆ ನಾನು ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುವುದಾದರೆ, ತುಂಗಾ ಮೇಲ್ದಂಡೆ ನೀರಾವರಿ ಯೋಜನೆ ತಾಂತ್ರಿಕ ಸಲಹಾ ಸಮಿತಿ ಎದುರಿಗೆ ಇದ್ದು ಒಂದು ವರ್ಷಕ್ಕೂ ಮೇಲ್ಪಟ್ಟು ಆಯಿತು. ಆ ಸಮಿತಿಯು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಒಂದು ವರ್ಷಕ್ಕೂ ಮೇಲ್ಪಟ್ಟಾದರೆ ಇನ್ನು ಎರಡು ಸಾವಿರ ಇಸವಿಯೊಳಗಾಗಿ ರಾಜ್ಯದ ನೀರನ್ನು ಬಳಕೆ ಮಾಡಿಕೊಳ್ಳಲು ಹೇಗೆ ಸಾಧ್ಯ? ನೀರಾವರಿಗೆ ಒದಗಿಸಿರತಕ್ಕಂಥ ಹಣ ನೋಡಿದರೆ ನಿಮಗೆ ಎರಡು ಸಾವಿರ ಇಸವಿಯೊಳಗೆ ನಮ್ಮ ಪಾಲಿನ

ನೀರನ್ನು ನಾವು ಬಳಸಿಕೊಳ್ಳುವ ಮನಸ್ಸು ತಮಗೆ ಇದೆಯೇ ನಿಜವಾಗಿಯೂ ಈ ಸರ್ಕಾರಕ್ಕೆ ಕಳಕಳಿ ಇಲ್ಲ, ಕೇವಲ ಇದು ಜನರನ್ನು ತಪ್ಪು ದಾರಿಗೆ ಎಳೆಯುವಂತಹ ಪ್ರಯತ್ನ ಎನ್ನುವ ಮಾತನ್ನು ನಾನು ತಮಗೆ ತಿಳಿಸಲು ಇಚ್ಛಿಸುತ್ತೇನೆ. ಇನ್ನು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಲಿ ಮತ್ತು ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿದ್ದೀರಿ. ನನ್ನ ಅನೇಕ ಜನ ಸ್ನೇಹಿತರು ಮಾತನಾಡುತ್ತಾ, ಉತ್ತರ ಕರ್ನಾಟಕ, ಮತ್ತು ಬಾಂಬೆ ಕರ್ನಾಟಕದ ಅಭಿವೃದ್ಧಿಯನ್ನು ಸಂಪೂರ್ಣವಾಗಿ ಈ ಸರ್ಕಾರ ನಿರ್ಲಕ್ಷ್ಯ ಮಾಡಿದೆ ಎಂದು ಹೇಳಿದರು. ಹೈದ್ರಾಬಾದ್-ಕರ್ನಾಟಕದ ಅಭಿವೃದ್ಧಿ ಮತ್ತು ಮಲೆನಾಡು ಅಭಿವೃದ್ಧಿ ಇವುಗಳ ನಡುವೆ ಬಯಲು ಪ್ರದೇಶಗಳಾದ ಉತ್ತರ ಕರ್ನಾಟಕ, ಧಾರವಾಡ, ಬೆಳಗಾಂ,ಬಿಜಾಪುರ ಜಿಲ್ಲೆಗಳನ್ನು ಈ ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ಈ ಭಾಗದಲ್ಲಿ ಯಾವುದೇ ಒಂದು ಹೊಸ ಯೋಜನೆ ಹಾಕಲಿಕ್ಕೆ ಸಹ ಸರ್ಕಾರ ಯೋಜನೆಗಳನ್ನು ತಯಾರುಮಾಡಿಲ್ಲ. ಆದ್ದರಿಂದ ಉತ್ತರ ಕರ್ನಾಟಕ ಅಭಿವೃದ್ಧಿ ಮಂಡಲಿಯನ್ನು ಈ ಸರ್ಕಾರ ರಚನೆ ಮಾಡಿ ಅದರ ಮೂಲಕ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಸರ್ಕಾರ ಏನು ಸ್ಥಾಪನೆ ಮಾಡಿದೆ, ಆ ಮಂಡಲಿಗೆ ಇಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ. ಇದಕ್ಕೆ ಇನ್ನೂ ಹೆಚ್ಚು ಹಣ ಒದಗಿಸುವುದರ ಜೊತೆಗೆ ಧಾರವಾಡಜಿಲ್ಲೆಯ ಹೀರೆಕೆರೂರು, ಹಾನಗಲ್, ಕಲಘಟಗಿ ತಾಲ್ಲೂಕುಗಳು ಅರೆ ಮಲೆನಾಡು ಪ್ರದೇಶಗಳಾಗಿದ್ದು ಈ ತಾಲ್ಲೂಕುಗಳನ್ನು ಮಲೆನಾಡು ಅಭಿವೃದ್ಧಿ ಮಂಡಲಿಯಲ್ಲಿ ಸೇರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಶ್ರೀ ಹೆಚ್.ಆರ್.ಗೂಡವಾಲರವರ ಆಯೋಗದ ವರದಿಯನ್ನು ಮತ್ತು ಚಿನ್ನಪ್ಪರೆಡ್ಡಿ ಆಯೋಗದ ವರದಿಗಳನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಎನ್ನುವ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಜನತೆಗೆ ಈ ಸದನದ ಮೂಲಕ ಕೂಗಿ ಕೂಗಿ ಹೇಳಿದರು. ಈ ಸರ್ಕಾರ ಹಿಂದುಳಿದ ವರ್ಗಗಳ ಪರ ಇದೆ,ಬಡವರ ಪರ ಇದೆ, ಅಲ್ಪಸಂಖ್ಯಾತರ ಪರ ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಆದರೆ ವರದಿಗಳನ್ನು ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದಕ್ಕೆ ಏಕೆ ಇಷ್ಟು ವಿಳಂಬ? ನಿಜವಾಗಿಯೂ ಅಲ್ಪಸಂಖ್ಯಾತರ ಬಗ್ಗೆ, ಹಿಂದುಳಿದ ವರ್ಗದವರ ಬಗ್ಗೆ ಈ ಸರ್ಕಾರಕ್ಕೆ ಕಳಕಳಿ ಇದ್ದಿದ್ದರೆ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಅಲ್ಪಸಂಖ್ಯಾತರ ವರದಿಯನ್ನು ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳಬಹುದಿತ್ತು. ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದಿತ್ತು. ಅದೇ ರೀತಿ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಪರಿಶೀಲನೆ ಮಾಡಿ ನಿರ್ಣಯ ತೆಗೆದುಕೊಳ್ಳಬಹುದಿತ್ತು. ಈ ಸರ್ಕಾರಕ್ಕೆ ಈ ಜನರ ಬಗ್ಗೆ ನಿಜವಾದ ಕಳಕಳಿ ಇಲ್ಲ, ಅಲ್ಪಸಂಖ್ಯಾತರ ಬಗ್ಗೆ ಕಳಕಳಿ ಇಲ್ಲ, ಹಿಂದುಳಿದ ವರ್ಗದವರ ಬಗ್ಗೆ ಕಳಕಳಿ ಇಲ್ಲ ಇದು ಕೇವಲ ರಾಜಕೀಯ ತಂತ್ರ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅನೇಕ ಸಾರಿ ಹೇಳಿದ್ದಾರೆ, ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿ ಹೇಳಿ ಈಗಾಗಲೇ ನಿಮ್ಮ ಸರ್ಕಾರದ ಒಬ್ಬ ಮುಖ್ಯಮಂತ್ರಿಗಳು ಅಂದರೆ ಶ್ರೀಮಾನ್ ವೀರೇಂದ್ರಪಾಟೀಲರು ಹೋದರು ಅದೇ ರೀತಿ ತಾವು ಹೋಗಬಾರದು ಎನ್ನುವುದು ನಮ್ಮ ಕಳಕಳಿ. ನಿಮ್ಮ ಸರ್ಕಾರ ಉಳಿಯಬೇಕಾಗಿದ್ದರೆ ತಾವು ಬೇಗ ನಿರ್ಣಯ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಆರ್.ಎನ್. ನಾಯಕ್ : ಅಲ್ಲಿ ಏನಾಯಿತು? ಚಿನ್ನಪ್ಪರೆಡ್ಡಿ ಆಯೋಗದ ವರದಿಯಿಂದ ನಮಗೆ ತೊಂದರೆ ಆಗಬಹುದು. ಆದರೆ ಅಲ್ಲಿ ಒಂದು ವರ್ಷದಲ್ಲಿ ಏನಾಯಿತು?

ಶ್ರೀ ಬಿ.ಎಚ್. ಬನ್ನಿಕೋಡ್ : ಪ್ರಾಮಾಣಿಕ ಪ್ರಯತ್ನ ಮಾಡಿ ಮಂಡಲ್ ಆಯೋಗ ಜಾರಿಗೆ ತಂದಿದ್ದಕ್ಕೆ ಒಂದು ಸರ್ಕಾರ ಹೋಗಿದೆ. ನೀವು ಅಪ್ರಾಮಾಣಿಕವಾಗಿ ಮಾಡುತ್ತೀರಿ ಎನ್ನುವುದು ಜನರಿಗೆ ಗೊತ್ತಾದರೆ ನಿಮ್ಮ ಗತಿ ಏನಾಗಬಹುದು ಎಂದು ತಾವು ಯೋಚನೆ ಮಾಡಬೇಕು.

ಶ್ರೀ ಆರ್.ಎನ್. ನಾಯಕ್ : ನಾವು ಬಂದಿರುವುದು ಇಲ್ಲಿ ಇರುವುದಕ್ಕೆ. ನೀವು ಅಲ್ಲಿ ಇದ್ದೀರಲ್ಲಾ ಇಲ್ಲಿಗೆ ಬರುವುದಕ್ಕೆ ಪ್ರಯತ್ನ ಮಾಡಿ, ಯಾರು ಬೇಡವೆನ್ನುತ್ತಾರೆ ಸುಮ್ಮನೆ ಹೀಗೆ ಭಾಷಣ ಮಾಡಿದರೆ ಆಗುತ್ತದೆಯೇ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗಾಗಲೇ ಹಿರಿಯ ಸದಸ್ಯರು ಲೋಕಸಭೆ ವಿಸರ್ಜನೆಯಾಗಿದೆ, ರಾಜ್ಯ ವಿಧಾನ ಸಭೆಯೂ ವಿಸರ್ಜನೆಯಾಗಲಿ, ನಾವು ಜನರ ಹತ್ತಿರ ಹೋಗೋಣ ಎಂದು ಹೇಳಿದರು ತಾವು ಅದಕ್ಕೆ ಒಪ್ಪಿಗೆ ಕೊಡುತ್ತೀರಾ ಹೇಳಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ನಾಯಕ್‌ರವರು ಬಹಳ ಸ್ವಾರಸ್ಯವಾಗಿ ನಾವು ಇಲ್ಲಿ ಆಡಳಿತ ಮಾಡುವುದಕ್ಕೆ ಬಂದಿದ್ದೇವೆ, ನೀವು ಅಲ್ಲಿ ಇರುವುದಕ್ಕೆ ಬಂದಿದ್ದೀರಿ ನೀವು ಇಲ್ಲಿಗೆ ಬರುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿದ್ದಾರೆ. ಪಾರ್ಲಿಮೆಂಟ್‌ನಲ್ಲಿ ನಿಮ್ಮ ಲೀಡರ್ ನಮ್ಮನ್ನು ಉಳಿಸಲಿಕ್ಕೆ ಏನು ಮಾಡಿದರು ಎನ್ನುವುದು ಗೊತ್ತಿದೆ. ಹಾಗೆ ನಾವೂ ಇಲ್ಲಿ ಮಾಡುತ್ತಿದ್ದೇವೆ.ಅದು ಸದ್ಯದಲ್ಲೇ ಆಗುತ್ತದೆ. ನಿನ್ನೆ ಸಾಯಂಕಾಲ ಸಭೆ ಸೇರಿತ್ತಲ್ಲಾ ಅದೇ ಸೂಚನೆ, ತಿಳಿದು ಕೊಳ್ಳಿ.

ಶ್ರೀ ಆರ್.ಎನ್. ನಾಯಕ್ : ನಿನ್ನೆ ಸಾಯಂಕಾಲ ಸಭೆ ಸೇರುವುದಕ್ಕೆ ನಿಮ್ಮ ಕುಮಕ್ಕು ಇದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಂಡಿತಾ ಹೌದು. ಅದೇ ನನ್ನ ಆಸೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ರಾಜ್ಯದ ಜನರ ಆಸೆ ಏನಿದೆ ಎನ್ನುವುದನ್ನು ಇನ್ನು ಸ್ವಲ್ಪ ದಿನಗಳಲ್ಲೇ ನೋಡುತ್ತೇವೆ. ನಾವು ನೀವು ಏನು ಹೇಳಿದರೂ ಪ್ರಯೋಜನವಿಲ್ಲ. ಜನರ ಆಸೆ ಏನಿದೆ ಎನ್ನುವುದನ್ನು ಅವರು ನಿರ್ಣಯ ಕೊಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ಅಲ್ಪಸಂಖ್ಯಾತರ ಬಗ್ಗೆ ಈ ಸರ್ಕಾರಕ್ಕೆ ಕಳಕಳಿ ಇಲ್ಲ. ಈ ರಾಷ್ಟ್ರದ ಜನತೆಗೆ ಬಾಬ್ರಿ ಮಸೀದಿ ಮತ್ತು ರಾಮ ಜನ್ಮ ಭೂಮಿ ವಿವಾದ ಗೊತ್ತಿದೆ. ಈ ರಾಷ್ಟ್ರದಲ್ಲಿ 40 ವರ್ಷಗಳಿಗೂ ಮೇಲ್ಪಟ್ಟು ಆಡಳಿತ ಮಾಡಿದ ಕಾಂಗ್ರೆಸ್ ಸರ್ಕಾರ ಈ ಬಾಬ್ರಿ ಮಸೀದಿ ಮತ್ತು ರಾಮ ಜನ್ಮ ಭೂಮಿ ವಿವಾದದ ಸಮಸ್ಯೆಯನ್ನು ಹಾಗೇ ಇಟ್ಟು ಅಲ್ಪ ಸಂಖ್ಯಾತರ ಮತಗಳನ್ನು ಕಬಳಿಸುವುದಕ್ಕೆ ಮಾಡಿದಂಥ ಹುನ್ನಾರ ಈ ರಾಷ್ಟ್ರದ ಜನಕ್ಕೆ ಗೊತ್ತಿದೆ. ಅದೇ ರೀತಿಯಲ್ಲಿ ಅಲ್ಪ ಸಂಖ್ಯಾತರ ವರದಿ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲ.

ಶ್ರೀ ಆರ್.ಎನ್. ನಾಯಕ್ : ನೀವು ಯಾರಿಗೆ ಹೇಳುತ್ತಿದ್ದೀರಿ? ನಮಗೆ ಹೇಳುತ್ತಿದ್ದೀರೋ ಅಥವಾ ರುಕ್ಮಯ್ಯ ಪೂಜಾರಿಯವರಿಗೆ ಹೇಳುತ್ತಿದ್ದೀರೋ? ನೀವು ಐದಾರು ಜನ ಇದ್ದೀರಿ. ಅವರು ಒಬ್ಬರೇ ಇದ್ದಾರೆ ಭಯ ಪಡುತ್ತಾರೆ, ಹೇಳಬೇಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ರಾಷ್ಟ್ರದಲ್ಲಿ ಆ ವಿವಾದವನ್ನು 40 ವರ್ಷಗಳ ಕಾಲ ಮುಂದೂಡುತ್ತಾ ಬಂದಿದ್ದೇ ಈ ಸಮಸ್ಯೆಗೆ ಕಾರಣ ಎನ್ನುವುದನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಇದನ್ನು ಕೇಳುವುದಕ್ಕೆ ಮಾನ್ಯ ಸ್ನೇಹಿತರಿಗೆ ಮನಸ್ಸು ಇಲ್ಲವೆಂದು ಕಾಣುತ್ತದೆ. ಅದೇ ರೀತಿ ಅಲ್ಪ ಸಂಖ್ಯಾತರ ವರದಿ ಏನಿದೆ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಹಾಗೆಯೇ ಮುಂದಕ್ಕೆ ಹಾಕುತ್ತಾ ಅವರ ಮತಗಳನ್ನು ಕಬಳಿಸುವುದಕ್ಕೆ ಮಾಡಿದಂಥ ಮತ್ತೊಂದು ಸಾಹಸ ಇಲ್ಲಿ ಕಂಡು ಬರುತ್ತಿದೆ. ಇನ್ನೊಂದು ಪ್ರಾಮುಖ್ಯವಾದುದೆಂದರೆ, ಈ ಸರ್ಕಾರಕ್ಕೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳವರು ಎಲ್ಲೇ ಹೋಗಲಿ ಅಲ್ಲಿ ಈ ವರ್ಷ ಒಂದು ತಾಲ್ಲೂಕಿಗೆ

ಒಂದು ಸಾವಿರ ಜನತಾ ಮನೆಗಳನ್ನು ಬಡವರಿಗೆ ಕಟ್ಟಿಸಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಮತ್ತು ಪರಿಶಿಷ್ಟ ಜಾತಿಯವರಿಗೆ ಒಂದು ಲಕ್ಷಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದನ್ನು ನೋಡಲಿಕ್ಕೆ ಮತ್ತು ಕೇಳಲಿಕ್ಕೆ ಬಹಳ ಸೊಗಸಾಗಿದೆ. ಇದು ಮುಗ್ಧ ಜನರನ್ನು ಮತ್ತು ಬಡವರನ್ನು ನಂಬಿಸಲಿಕ್ಕೆ ಬಹಳ ಸುಲಭವಾದ ದಾರಿ. ಇವತ್ತು ನಾನು ಈ ಸದನದ ಮೂಲಕ ಸರ್ಕಾರಕ್ಕೆ ಹೇಳುತ್ತೇನೆ. ನನ್ನ ಹಿರೇಕೆರೂರು ತಾಲ್ಲೂಕಿನಲ್ಲಿ ಜನತಾ ಮನೆಗಳನ್ನು ಕಟ್ಟಿಸಿರುವ ಬಾಬತ್ತಿಗೆ ಕೊಡಬೇಕಾದ 22 ಲಕ್ಷ ರೂಪಾಯಿಗಳನ್ನು ಇನ್ನೂ ಕೊಟ್ಟಿಲ್ಲ. ಕಟ್ಟಿದ ಮನೆಗಳಿಗೆ ದುಡ್ಡು ಕೊಟ್ಟಿಲ್ಲ. ಮನೆಗಳು ಅರ್ಧಕ್ಕೇ ನಿಂತಿವೆ.

ಶ್ರೀ ಆರ್.ಎನ್. ನಾಯಕ್ : ಅದು 1985ನೇ ಇಸವಿಯಿಂದ ಇದೆ. ಆಗ ನಿಮ್ಮ ಸರ್ಕಾರ ಇತ್ತು. ನೀವೇ ಅದನ್ನು ಕೊಡಲಿಲ್ಲ, ನೀವು ಮಾಡಿರುವಂಥಾದ್ದಕ್ಕೆ ನಾವ್ಯಾಕೆ ಕೊಡಬೇಕು?

ಶ್ರೀ ಬಿ.ಹೆಚ್. ಬನ್ನಿಕೋಡ್ : ಜನತಾ ಮನೆಗಳ ಬಾಕಿ ಹಣವನ್ನು ನಮ್ಮ ತಾಲ್ಲೂಕಿಗೆ 22 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ನಮ್ಮ ಧಾರವಾಡ ಜಿಲ್ಲೆಗೆ ಒಟ್ಟು 3 ಲಕ್ಷ 87 ಸಾವಿರ ರೂಪಾಯಿಗಳನ್ನು ಈ ಸರ್ಕಾರ ಬಾಕಿ ಕೊಡಬೇಕಾಗಿದೆ. ಪರಿಸ್ಥಿತಿ ಹೀಗಿರುವಾಗ ಈಗ ಒಂದು ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಸರ್ಕಾರ ಹೇಳಿದರೆ ಇದರಲ್ಲಿ ಹುರುಳು ಇದೆಯೇ? ಇದು ಕೇವಲ ಜನರನ್ನು ಮೋಸಗೊಳಿಸತಕ್ಕಂಥ ಕೃತಿಯೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದು ಹೇಗಿದೆ ಎಂದರೆ, "ಕತ್ತೆ ಸವಾರ ಕತ್ತೆ ಮೇಲೆ ಕುಳಿತು ಕೊಂಡು ಸವಾರಿ ಮಾಡುತ್ತಿದ್ದಾನೆ. ಕತ್ತೆಗೆ ಹಸಿವಾಗಿದೆ. ಅದರ ಮೇಲೆ ಕುಳಿತು ಒಂದು ಕಟ್ಟಿಗೆಗೆ ಹುಲ್ಲನ್ನು ಕಟ್ಟಿಕೊಂಡು ಅದರ ಬಾಯಿಗೆ ಸಿಗದಂತೆ ಮುಂದೆ ಹಿಡಿದು ಅವನು ಸವಾರಿ ಮಾಡುತ್ತಿದ್ದಾನೆ. ಆ ಕಟ್ಟಿಗೆಯಲ್ಲಿರುವ ಹುಲ್ಲನ್ನು ಅದಕ್ಕೆ ತೋರಿಸುತ್ತಿದ್ದಾನೆ. ಕತ್ತೆಗೆ ತಿನ್ನಲ್ಲಿಕ್ಕೆ ಹುಲ್ಲು ಸಿಕ್ಕುವ ಹಾಗಿಲ್ಲ, ಅವನು ಸವಾರಿ ಮಾಡುವುದನ್ನು ಬಿಡುವ ಹಾಗಿಲ್ಲ. ಈ ರೀತಿ ರಾಜ್ಯದ ಬಡವರ ಮೇಲೆ ಸವಾರಿಯನ್ನು ಮಾಡಲಿಕ್ಕೆ ಇದೊಂದು ಸಾಹಸ." ಇದೊಂದು ಬಡವರನ್ನು ವಂಚನೆ ಮಾಡಲಿಕ್ಕೆ ಇಟ್ಟುಕೊಂಡ ಸಾಹಸ. ಇದು ಕತ್ತೆ ಸವಾರಿ ಸರ್ಕಾರವಾಗಿದೆ ಎಂಬ ಒಂದು ಭಾವನೆ ಜನರಲ್ಲಿ ಬರುವುದಕ್ಕೆ ಕಾರಣ ಆಗುತ್ತದೆಯೇ ವಿನಹ ಈ ಕಾರ್ಯಕ್ರಮ ಸಫಲ ಆಗುವುದಿಲ್ಲ ಎಂದು ತಮ್ಮ ಮೂಲಕ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಕುಡಿಯುವ ನೀರಿನ ವಿಚಾರದಲ್ಲಿ ಹೇಳುತ್ತೇನೆ. ಈ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಎಲ್ಲಾ ಗ್ರಾಮಗಳಿಗೂ ಪಟ್ಟಣಗಳಿಗೂ ಸಣ್ಣ ದೊಡ್ಡ ನೀರಾವರಿ ಯೋಜನೆಗಳನ್ನು ಕುಡಿಯುವ ನೀರಿನ ಯೋಜನೆಗಳನ್ನು ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ ಹಿಂದೆಂದೂ ಈ ರಾಜ್ಯದಲ್ಲಿ ಕಂಡಿರಲಿಲ್ಲ. ಬಜೆಟ್‌ನಲ್ಲಿ ಬಂದಂತಹ ಯೋಜನೆಗಳಲ್ಲಿ ಬಂದಂತಹ ಎಲ್ಲಾ ಕುಡಿಯುವ ನೀರಿನ ಯೋಜನೆಗಳಿಗೂ ಸಮರ್ಪಕವಾಗಿ ಸಾಕಷ್ಟು ಹಣವನ್ನು ಕೊಟ್ಟು ಹಿಂದಿದ್ದಂತಹ ಸರ್ಕಾರಗಳು ಅವನ್ನು ಕಾರ್ಯರೂಪಕ್ಕೆ ತರುತ್ತಿದ್ದುವು. ಈ ವರ್ಷ ಯೋಜನೆಗಳಲ್ಲಿ ಹಾಕಿದಂತಹ ಕಾರ್ಯಕ್ರಮಗಳನ್ನು ಸಹಿತ ಅರ್ಧಕ್ಕೆ ಸ್ಥಗಿತವಾಗಿದೆ. ಹಣ ಪೂರೈಕೆ ಆಗಿಲ್ಲ. ಇವತ್ತು ಕುಡಿಯುವ ನೀರು ಹಳ್ಳಿಗಳಲ್ಲಿ ಇಲ್ಲ. ಆರು ತಿಂಗಳಿನಿಂದ ನನ್ನ ಕ್ಷೇತ್ರದಲ್ಲಿ ಒಂದು ಬೋರ್ ಹಾಕಲಿಕ್ಕೆ ಸರ್ಕಾರಕ್ಕೆ ಆಗಿಲ್ಲ. ಅದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದರೂ ಸಹ ಈ ತನಕ ಏನೂ ಪ್ರಯೋಜನ ಆಗುತ್ತಿಲ್ಲ. ಕುಡಿಯುವುದಕ್ಕೆ ನೀರು ಇಲ್ಲದೆ

ಜನ ಪರದಾಡುತ್ತಿದ್ದಾರೆ. ಇವತ್ತು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ದನಗಳಿಗೆ ಕುಡಿಸಲಿಕ್ಕೆ ನೀರು ಇಲ್ಲದೇ ದನಗಳು ಸತ್ತು ಹೋಗಿದ್ದಾವೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದರೆ ಸರ್ಕಾರ ಲಕ್ಷ್ಯ ಕೊಡುತ್ತಿಲ್ಲ. ಇದುವರೆಗೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ಒಂದು ವ್ಯವಸ್ಥಿತವಾದ ಸಮರ್ಪಕವಾದ ಯೋಜನೆಯನ್ನು ಈ ಸರ್ಕಾರ ಹಾಕಿಕೊಂಡಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಇನ್ನು ಒಂದು ಮಾತು. ಸರ್ಕಾರ ರಾಜ್ಯಪಾಲರ ಭಾಷಣ ಮೂಲಕ ಈ ಸದನದಲ್ಲಿ ಮಂಡಿಸಿದ ಯಾವ ಕಾರ್ಯಕ್ರಮಗಳಿವೆ ಅವೆಲ್ಲಾ ಸಂಪೂರ್ಣವಾಗಿ ಕಾರ್ಯ ರೂಪಕ್ಕೆ ಬರಲಿಕ್ಕೆ ಸಾಧ್ಯ ಇಲ್ಲದಂತಹವುಗಳು. ಈ ಸರ್ಕಾರ ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿಸಿರತಕ್ಕ ಕಾರ್ಯಕ್ರಮಗಳಲ್ಲಿ ಯಾವುದೇ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಅಳವಡಿಸಿಲ್ಲ, ಕೇವಲ ರಾಜಕೀಯ ಗತ್ತುಗಾರಿಕೆಗಾಗಿ, ರಾಜಕೀಯ ತಂತ್ರಕ್ಕಾಗಿ ಮಾಡಿಸಿರುವಂತಹ ಭಾಷಣ. ಇದರಲ್ಲಿ ಯಾವುದೇ ಅಭಿವೃದ್ಧಿಯ ಬಗ್ಗೆ ಕಳಕಳಿ ಇಲ್ಲದೆ ಇರುವುದರಿಂದ, ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಬಗ್ಗೆ ಕಳಕಳಿ ಇಲ್ಲದೇ ಇರುವದರಿಂದ ಇದನ್ನು ನಾನು ವಿರೋಧಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ ಹಾಗೂ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸುತ್ತೇನೆ.

ಡಾ: ಎಸ್.ಬಿ. ನಂಜಪ್ಪ (ಶ್ರವಣ ಬೆಳಗೊಳ) : ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಪ್ರಪ್ರಥಮವಾಗಿ "ಅಡ್ರೆಸ್ ಅಫ್ ದಿ ಗವರ್ನರ್ ಆಫ್ ಕರ್ನಾಟಕ ಟು ದಿ ಸ್ಟೇಟ್ ಲೆಜಿಸ್ಲೇಚರ್" ಇದನ್ನು ಸ್ವಾಗತ ಮಾಡುತ್ತಾ, ನನ್ನ ಅನಿಸಿಕೆಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ನಾವು ಚರ್ಚೆಯನ್ನು ಪ್ರಾರಂಭ ಮಾಡಿದಂದಿನಿಂದ ನಮ್ಮ ರೂಲಿಂಗ್ ಪಾರ್ಟಿಯವರು ಇದು ಬಹಳ ಚೆನ್ನಾಗಿದೆ, ಇದನ್ನು ನಾವು ಸ್ವಾಗತ ಮಾಡುತ್ತೇವೆ ಎಂದು ಹೇಳಿದ ಮಾತನ್ನು ಕೇಳುತ್ತಿದ್ದೇವೆ. ಇದಕ್ಕೆ ವಿರುದ್ಧವಾಗಿ, ಆಪೋಸಿಷನ್‌ನವರು ಈ ಗವರ್ನರ್ ಅಡ್ರಸ್‌ನಲ್ಲಿ ಏನೂ ಇಲ್ಲ ಇದು ಒಂದು ಯಾವುದಕ್ಕೂ ಪ್ರಯೋಜನವಿಲ್ಲದಂತಹುದು ಎಂದು ಹೇಳಿದಂತಹ ಮಾತುಗಳನ್ನು ನಾವು ಕೇಳುತ್ತಿದ್ದೇವೆ.

5.45 ಪಿ.ಎಂ

ಇದು ಸಮಯೋಚಿತವಾಗಿ ಮತ್ತು ಅವರವರ ಮೂಗಿನ ನೇರಕ್ಕೆ ಹೇಳತಕ್ಕಂಥ ಮಾತು ಎನ್ನುವುದು ಎಲ್ಲರಿಗೂ ಕೂಡ ಗೊತ್ತಿದೆ. ಇದು ಸಂಪ್ರದಾಯದ ವಿಚಾರ ಎನ್ನುವುದನ್ನು ಯೋಚನೆ ಮಾಡಿದಾಗ ಇದರ ಬಗ್ಗೆ ವಿಷಾದ ಪಡಬೇಕಾಗಿದೆ ಎಂದು ನನ್ನ ಮನಸ್ಸಿಗೆ ಅನ್ನಿಸುತ್ತದೆ. ನಮಗೆ 1947ನೇ ಇಸವಿಯಲ್ಲಿ ಸ್ವಾತಂತ್ರ್ಯ ಬಂತು. ಈ ರಾಜ್ಯಪಾಲರ ಭಾಷಣ ಮತ್ತು ಬಜೆಟ್ ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ಇದು ಸರ್ವೇಸಾಧಾರಣವಾಗಿ ನಾವು ಕೇಳತಕ್ಕಂಥ ಒಂದು ವಿಷಯ. ಆದರೆ ಮೂಲಭೂತವಾಗಿ ನಾವು ಯಾವುದೇ ಸೆರಕಾರದ ವ್ಯಾಪ್ತಿಯಲ್ಲಿ ಜನಹಿತ ಕಾರ್ಯಗಳನ್ನು ಮಾಡತಕ್ಕಂತ ಯೋಜನೆಗಳು ಇದರಲ್ಲಿ ಅಡಕವಾಗಿವೆಯೇ ಇಲ್ಲವೇ ಎಂಬುವುದನ್ನು ಪ್ರತಿಯೊಬ್ಬ ಸದನದ ಸದಸ್ಯರು ಕೂಡ ಯೋಚನೆ ಮಾಡಿ ನಿಜವನ್ನು ನಿಜ ಎಂದು ಒಪ್ಪಿಕೊಂಡು ಸುಳ್ಳನ್ನು ಸುಳ್ಳು ಎಂದು ಹೇಳತಕ್ಕಂಥ ಮನೋಭಾವನೆಯನ್ನು ಬೆಳೆಸಿಕೊಂಡರೆ ಮಾತ್ರ ನಾವು ಕಷ್ಟಪಟ್ಟು ಸಂಪಾದಿಸಿದಂಥ ಈ ಸ್ವಾತಂತ್ರ್ಯವನ್ನು ಉಳಿಸುಕೊಳ್ಳುವುದಕ್ಕೆ ಮತ್ತು ಬೆಳೆಸುವುದಕ್ಕೆ ಹಾಗೂ ಪ್ರಜಾಪ್ರಭುತ್ವವನ್ನು ಭದ್ರಪಡಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ನಿಸ್ಸಂದೇಹವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ನಮ್ಮ ವಿರೋಧಿಪಕ್ಷದ ಅನೇಕ ಜನ ಮಾನ್ಯ ಸದಸ್ಯರುಗಳು ಬಹಳ ಚೆನ್ನಾಗಿ ಅರಿತುಬರಿತವರು, ಇದರ ಬಗ್ಗೆ ಅನೇಕ ಅಪಾದನೆಗಳನ್ನು

ಮಾಡಿರತಕ್ಕಂಥಾದನ್ನು ನಾವು ಕೇಳಿದ್ದೇವೆ ಮತ್ತು ಅದೇ ಸಂದರ್ಭದಲ್ಲಿ ನಮ್ಮ ಪಕ್ಷದಿಂದ ಮಾತನಾಡಿರತರಕ್ಕಂಥವರು ಈ ಬಗ್ಗೆ ಬಹಳವಾಗಿ ಮಾತನಾಡಿದ್ದನ್ನು ಕೂಡ ನಾವೆಲ್ಲರೂ ಕೇಳಿದ್ದೇವೆ. ಆದರೆ ನಾನು ಪ್ರಪ್ರಥಮವಾಗಿ ಇದನ್ನು ಪ್ರಾರಂಭ ಮಾಡುತ್ತಾ ನಮ್ಮ ರಾಜ್ಯದ ರಾಜ್ಯಪಾಲರು ಭಾಷಣ ಮಾಡಿರತಕ್ಕಂಥ ಸಂದರ್ಭದಲ್ಲಿ ಕೆಲವು ಬಹಳ ಒಳ್ಳೆಯ ಮಾತುಗಳನ್ನು ಹೇಳಿದ್ದಾರೆ. ರಾಜ್ಯದ ಜನತೆ ಶಾಂತಿ ಪ್ರಿಯರು ಎಂದಿದ್ದಾರೆ. ನಮ್ಮ ಜನತೆ ಯಾವಾಗಲೂ ಕೂಡ You are very good people but useless people.

ನಮ್ಮ ಕರ್ನಾಟಕ ರಾಜ್ಯದಲ್ಲಿ ಹೇಗೆ ಆಗಿದೆ we are very good from the beginning but we are docile also in many respects.

ನಮಗೆ ಅಸರ್ಟೈನ್ ಮಾಡಿಕೊಳ್ಳತಕ್ಕಂಥ ನಮಗೆ ಬರತಕ್ಕಂಥಹ ಹವಿರ್ಭಾಗವನ್ನು ಧೈರ್ಯವಾಗಿ ಕೇಳತಕ್ಕಂಥ ಅನೇಕ ಲೀಡರ್‌ಗಳು ನಮ್ಮಲ್ಲಿ ಇಲ್ಲದ ಹಾಗಾಗಿದೆ ಎಂಬುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಇದನ್ನು ನಾನು ಇವೊತ್ತು ಹೇಳುತ್ತಾ ಇಲ್ಲ. ಮೊದಲನೇ ಪಂಚವಾರ್ಷಿಕ ಯೋಜನೆಯಿಂದ ನಮಗೆ ಬರತಕ್ಕಂಥಹ ವಿಭಾಗವನ್ನು ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಿಗೆ ಬಂದಂಥ ಹವಿರ್ಬಾಗವನ್ನು ಹೋಲಿಸಿ ನೋಡಿದಾಗ ವೇದ್ಯವಾಗುತ್ತದೆ. ನಮಗೆ ಕೇಂದ್ರ ಸರಕಾರದಿಂದ ಬರಬೇಕಾದನ್ನು ನಾವು ಕೇಳಿ ಪಡೆಯತಕ್ಕ ಶಕ್ತಿಯನ್ನು ಹಿಂದಿನಿಂದಲೂ ಗಳಿಸಿಕೊಂಡಿದ್ದರೆ, ನಿಜವಾಗಿಯೂ ನಾವು ಇಂದು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಬಹುದಾಗಿತ್ತು. ಇವೊತ್ತು ವಿಜಯನಗರದ ಉಕ್ಕಿನ ಕಾರ್ಖಾನೆಯ ಕುರುತು ಅಲ್ಲಿಯೇ ಕುಳಿತು ಒಳ್ಳೆಯ ಮಾತುಗಳನ್ನು ಇದರಲ್ಲಿ ನಾವು ಕೇಳುತ್ತಾ ಇದ್ದೇವೆ. ಈ ಬಗ್ಗೆ ಎಲ್ಲರ ಜವಾಬ್ದಾರಿಯೂ ಕೂಡ ಇದೆ. ಇವೊತ್ತು ಸದನದಲ್ಲಿ ಆಡಳಿತಪಕ್ಷದಲ್ಲಿ ಕುಳಿತಿರುವವರು, ಮತ್ತು ವಿರೋಧಪಕ್ಷದಲ್ಲಿ ಕುಳಿತಿರುವವರು ಇದ್ದೇವೆ. ಇವತ್ತು ವಿರೋಧಪಕ್ಷದಲ್ಲಿ ಕುಳಿತಿರುವವರು ಮೊನ್ನೆಯವರೆಗೆ ಆಡಳಿತಪಕ್ಷದಲ್ಲಿ ಕುಳಿತ್ತಿದ್ದವರೇ ಆಗಿದ್ದಾರೆ. ಅವರು ಮಾಡಿರತಕ್ಕಂಥ ಕಾರ್ಯಕ್ರಮಗಳು ಏನು, ಅವರು ಮಂಡಿಸಿದಂಥ ಅಥವಾ ಅವರ ಪ್ರಣಾಳಿಕೆಯಲ್ಲಿ ಹೇಳಿದಂಥ ಕೆಲಸಕಾರ್ಯಗಳನ್ನು ಅವರು ನಿಜವಾಗಿಯೂ ಅವರ ಆಡಳಿತದ 7-8 ವರ್ಷಗಳ ಕಾಲದಲ್ಲಿ ಮಾಡಿದ್ದಾರೆಯೆ? ಆ ಒಂದು ಸಂದರ್ಭದಲ್ಲಿ ಅವರು ಹೇಳಿದ ಹಾಗೆ ನಡೆದುಕೊಂಡು ಬಂದಿದ್ದಾರೆಯೆ? ಇದರಲ್ಲಿ ಇಂಟರ್‌ನಲ್ ರಿಸೋರ್ಸಸ್ ಮೊಬಲೈಸ್ ಮಾಡಿ ಜನಹಿತಪರ ಕಾರ್ಯಗಳನ್ನು ಮಾಡಿರತಕ್ಕಂಥ ಒಂದು ಶಕ್ತಿಯನ್ನು ಈ ರಾಜ್ಯಕ್ಕೆ ಅವರು ಕೊಟ್ಟಿದ್ದಾರೆಯೆ? ಎಂಬ ಬಗ್ಗೆ ನಾವು ಯೋಚನೆ ಮಾಡಿದರೆ ಅವರು ಹೇಳಿದ್ದು ಎಲ್ಲಾ ಸುಳ್ಳು ಎಂಬುದು ಖಚಿತವಾಗುತ್ತದೆ. ಅವರು ಆ ಕಾಲದಲ್ಲಿ ಆರ್ಥಿಕ ವ್ಯವಸ್ಥೆಯನ್ನು ಅಲ್ಟೋಲಕಲ್ಲೋಲ ಮಾಡಿ, ನಮ್ಮ ಕೈಗೆ ಬರಿದಾದ ಒಂದು ಖಜಾನೆಯನ್ನು ಕೊಟ್ಟು, ನಮ್ಮ ಈ ಸರಕಾರವನ್ನು ಅಸ್ತಿತ್ವಕ್ಕೆ ತಂದಿದ್ದನ್ನು ಪ್ರತಿಯೊಬ್ಬರು ಕೂಡ ಒಪ್ಪಿಕೊಳ್ಳುತ್ತಾರೆ. It is an open book. ಇಂಥ ಸಂದರ್ಭದಲ್ಲಿ ನಾವು ಈ ಕುರಿತು ಯಾವುದೇ ಒಂದು ಯೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ಇಂಟರ್ನಲ್ ರಿಸೋರ್ಸಸ್ ಮಾಡತಕ್ಕಂಥ ಯಾವುದೇ ಚಿಂತನೆಯನ್ನು ಮಾಡದೆ ಕೇವಲ ಓಟಿಗೋಸ್ಕರವಾಗಿ ಕಾರ್ಯಕ್ರಮಗಳನ್ನು ಹಾಕಿ, ಬೇಕಾದಷ್ಟು ಹಣವನ್ನು ಪೋಲು ಮಾಡಿ, ಕೇವಲ ಸ್ವಲ್ಪ ಹಣವನ್ನು ಮಾತ್ರ ಪ್ರೊಡಕ್ಟಿವ್ ಪರ್‌ಪಸ್‌ಗೆ ಉಪಯೋಗ ಮಾಡತಕ್ಕಂಥ ಕೆಲಸವನ್ನು ಎಲ್ಲರೂ ಬಿಡಬೇಕಾಗಿದೆ. ಆಗ ಮಾತ್ರ ಈ ದೇಶದಲ್ಲಿ ನಿಜವಾಗಿಯೂ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಬಹುದು. ಅದನ್ನು ಬಿಟ್ಟು ಓಟಿಗೋಸ್ಕರವಾಗಿ, ಜನಗಳನ್ನು ನಂಬಿಸುವುದಕ್ಕೋಸ್ಕರವಾಗಿ ಅಥವಾ ಯಾವುದೇ ಒಂದು ಒಳ್ಳೆಯ ಹೆಸರನ್ನು ಪಡೆಯುವುದಕ್ಕೋಸ್ಕರವಾಗಿ ನಾವು ಕೂಡ ಹೆದರಿಕೊಂಡು ಅನೇಕ ಕಾರ್ಯಕ್ರಮಗಳನ್ನು

ಹಾಕಿಕೊಳ್ಳುತ್ತೇವೆ. ಅದೇ ರೀತಿಯಲ್ಲಿ ಬೇರೆಯವರ ಸರಕಾರ ಮಾಡಿದರೂ ಕೂಡ ಆ ಒಂದು ಚುನಾವಣೆಯ ದೃಷ್ಟಿಯಿಂದ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅನೇಕ ತೊಂದರೆಗಳು ಬಂದು ಅನೇಕ ಕೆಲಸಕಾರ್ಯಗಳು ನಡೆಯದೆ ಕೇವಲ ಆಶ್ವಾಸನೆ ಮತ್ತು ಭರವಸೆಗಳಲ್ಲಿ ಉಳಿದುಕೊಳ್ಳುತ್ತವೆ. ತಮಿಳುನಾಡು ಮತ್ತು ನಮ್ಮ ರಾಜ್ಯದಲ್ಲಿ ಕೂಡ ಪುಸ್ತಕ, ಬಟ್ಟೆ, ಸೀರೆಗಳ ಹಂಚಿಕೆ ಮುಂತಾದ ಯೋಜನೆಗಳು ಬಂದಿದ್ದವು. ಅಮೇಲೆ ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಸಬ್ಸಿಡೈಸ್ಡ್ ಆರ್ಟಿಕಲ್ಸ್‌ನ್ನು ಪ್ರಪಂಚದಲ್ಲಿಯೇ ಮೊದಲನೇ ಸಾರಿ ಜನತಾಪಕ್ಷದವರು ಆಡಳಿತ ನಡೆಸತಕ್ಕಂಥ ಸಂದರ್ಭದಲ್ಲಿ ಅವರ ಪಾರ್ಟಿವರ್ಕರ್ಸ್‌ನ್ನು ಏಜೆಂಟ್ಸ್‌ಗಳನ್ನಾಗಿ ಮಾಡಿ ಡಿಸ್ಟ್ರಿಬ್ಯೂಟ್ ಮಾಡಿದರು. ಗ್ರೀನ್‌ಕಾರ್ಡ್‌ಗಳನ್ನು ಐಶ್ವರ್ಯವಂತರಿಗೆ ಹಂಚಿರತಕ್ಕಂಥ ವ್ಯವಸ್ಥೆಯನ್ನು ಮಾಡಿದಂಥ ಒಂದು ಕೀರ್ತಿ ಜನತಾ ಪಕ್ಷದವರಿಗೇ ಹೋಗುತ್ತದೆ. ಆದುದರಿಂದ ಆ ವಿಚಾರವಾಗಿ ಮಾತನಾಡುವುದಕ್ಕೆ ಅವರಿಗೆ ಯಾವುದೇ ಒಂದು ನೈತಿಕ ಹಕ್ಕು ಇಲ್ಲ ಎಂದು ಹೇಳಬಯಸುತ್ತೇನೆ. ನಾನು ಏತಕ್ಕೆ ಈ ವಿಚಾರವನ್ನು ಹೇಳುತ್ತಿದ್ದೇನೆ ಅಂದರೆ, ಈ ಗ್ರೀನ್‌ಕಾರ್ಡ್ ವಿತರಣೆಯಲ್ಲಿ ಆಗುತ್ತಿರುವ ಮೋಸ, ಆಹಾರವಸ್ತುಗಳ ವಿತರಣೆಯಲ್ಲಿ ಆಗುತ್ತಿರುವ ಮೋಸ ಮುಂತಾದುವುಗಳನ್ನು ಹೇಗೆ ನಿವಾರಿಸಬಹುದು ಮತ್ತು ಆ ದಿಶೆಯಲ್ಲಿ ನಮ್ಮ ಸರಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುವುದನ್ನು ಈ ಸದನದ ಮುಂದೆ ನಮ್ಮ ರಾಜ್ಯಪಾಲರು ಇಟ್ಟಿದ್ದಾರೆ. ಅಂಥ ಒಂದು ಭಾಷಣವನ್ನು ಅಪ್ರಿಸಿಯೇಟ್ ಮಾಡತಕ್ಕಂಥದ್ದು ನಮ್ಮೆಲ್ಲರ ಕರ್ತವ್ಯ. ಅದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಮ್ಮಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲಪಂಚಾಯತ್ ವ್ಯವಸ್ಥೆ ಬಂದಮೇಲೆ ಏನೇನು ಅನ್ಯಾಯವಾಗಿದೆ ಎನ್ನುವುದು it is an open book ಎಂಬುವುದು ಎಲ್ಲರಿಗೂ ಗೊತ್ತು. ಇದನ್ನು ರೆಕ್ಟಿಫೈ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಆಗ ಮಾತ್ರ ಒಂದು ಸರಕಾರವನ್ನು ಅಥವಾ ಒಂದು ದೇಶವನ್ನು ಚೆನ್ನಾಗಿ ಇಡುವುದಕ್ಕೆ ಸಾಧ್ಯ ಅದನ್ನು ಬಿಟ್ಟು ನಮ್ಮ ಮೂಗಿನ ನೇರಕ್ಕೆ ಮಾತನಾಡುವುದು ಸರಿಯಲ್ಲ. ಈ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತ್ ವ್ಯವಸ್ಥೆ ಬಂದ ಮೇಲೆ ಅದರ ಪರಿಣಾಮ ಏನಾಗಿದೆ ಎಂಬುವುದನ್ನು ನಮ್ಮ ಹಳ್ಳಿಯ ಜನರನ್ನು ಕೇಳಿದರೆ ಗೊತ್ತಾಗುತ್ತದೆ. ಅದನ್ನು ಕೇಳುವುದನ್ನು ಬಿಟ್ಟು ಕೇವಲ ಇಲ್ಲಿ ಸದನದಲ್ಲಿ ಸದಸ್ಯರು ಕುಳಿತು ಮಾತನಾಡುವುದಲ್ಲ. Please go and enquire about a common man what he will say and get a report. Then we will talk about it. ಅದಕ್ಕೋಸ್ಕರವಾಗಿ ನಾನು ಏನು ಹೇಳುತ್ತಿದ್ದೇನೆ ಅಂದರೆ, ಏನೇನು ಈ ಕುರಿತು ಏನೇನು ಡಿಫೆಕ್ಟ್ ಇವೆಯೋ ಇದರ ಬಗ್ಗೆ ಚಿಂತನೆ ಮಾಡತಕ್ಕಂಥ ಒಂದು ರಿಪೋರ್ಟ್ ನಮ್ಮ ಮುಂದೆ ಇದೆ. ಇದರ ಬಗ್ಗೆ ನಾವೆಲ್ಲರೂ ಮಾತನಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಜನತೆಯ ಬಗ್ಗೆ ಅವರು ಒಳ್ಳೆಯ ಮಾತನ್ನು ಆಡಿದ್ದಾರೆ ಅದಕ್ಕಾಗಿ ನಾವು ರಾಜ್ಯಪಾಲರನ್ನು ಅಭಿನಂದಿಸಬೇಕಾಗಿದೆ. ಇಂಥ ಒಂದು ಶಾಂತಿಯುತವಾದ ರಾಜ್ಯದಲ್ಲಿ ಇದ್ದಕ್ಕಿದ್ದ ಹಾಗೆ ಕೋಮುಗಲಭೆಗಳು ಬಂತು ಇದಕ್ಕೆ ಕಾರಣಕರ್ತರು ಯಾರು? ಅದು ಏತಕ್ಕಾಗಿ ಇದ್ದಕ್ಕಿದ್ದ ಹಾಗೆ ನಿಂತುಹೋಯಿತು? ಇದನ್ನೆಲ್ಲ ಯೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರವಿದ್ದಾಗಲೇ ಕೋಮುಗಲಭೆ ಪ್ರಾರಂಭವಾಯಿತು. ಆದರೆ ಅದು ಒಂದೇ ಒಂದು ತಿಂಗಳಲ್ಲಿ ನಿಂತುಹೋಯಿತು. ಇದಕ್ಕೆ ಕಾರಣಕರ್ತರು ಬೇರೆ ಯಾರಾದರೂ ಇದ್ದೇ ಇರಬೇಕು. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಮತ್ತು ಇಡೀ ದೇಶದಲ್ಲಿಯೇ ಶಾಂತಿಸೌಹಾರ್ದಗಳು ನೆಲೆಸಿದೆ. ಯಾವುದೋ ದುಷ್ಟಶಕ್ತಿಗಳು ಈ ದುಷ್ಕೃತ್ಯಗನ್ನು ಮಾಡಿಸಿರಬಹುದು. ಆ ದುಷ್ಟ ಶಕ್ತಿಗಳನ್ನು ಅಡಗಿಸಲು, ಬಗ್ಗುಬಡಿಸಲು, ನಾವೆಲ್ಲರೂ ಪ್ರಯತ್ನಮಾಡಬೇಕಾಗಿದೆ. ಇದರ ಬಗ್ಗೆಯೂ ಕೂಡ ಮಾನ್ಯ ರಾಜ್ಯಪಾಲರು ಸೂಕ್ತ ಮಾತುಗಳನ್ನು ಹೇಳಿರುವ ಕಾರಣಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ನಮ್ಮ ಸರಕಾರದವರು ಹಾಕಿಕೊಂಡಿರತಕ್ಕಂಥ ಕಾರ್ಯಕ್ರಮಗಳಲ್ಲಿ ಬಹಳ ಮುಖ್ಯವಾದುದು ವಿದ್ಯುಚ್ಛಕ್ತಿಯ ಕುರಿತಾದ ಕಾರ್ಯಕ್ರಮಗಳು ನಮ್ಮ ತಾಲ್ಲೂಕಿನಲ್ಲಿ ಸುಮಾರು ಎಂಟು ವರ್ಷಗಳಿಂದಲೂ ಅಂದರೆ 1983 ರಿಂದ ಇಂದಿನವರೆಗೆ 3,500 ಬಾವಿಗಳನ್ನು ಸಾಲ ತೆಗೆದು ರೈತರು ಮಾಡಿಕೊಂಡು ವಿದ್ಯುಚ್ಛಕ್ತಿಗಾಗಿ ಕಾಯುತ್ತಿದ್ದರೂ ಅವರಿಗೆ ಹಿಂದಿನ ಸರಕಾರದಿಂದ ವಿದ್ಯುಚ್ಛಕ್ತಿಯನ್ನು ಪೂರೈಸುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ಸರಕಾರದವರು ಈ ತಿಂಗಳ ಅಂತ್ಯದೊಳಗಾಗಿ 1,300 ಕೊಳವೆ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸತಕ್ಕಂಥ ಮಹಾಕಾರ್ಯವನ್ನು ಮಾಡಿದ್ದಾರೆ.

ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ಸುಮಾರು ಅರವತ್ತು ಸಾವಿರ ಪಂಪುಸೆಟ್ಟುಗಳಿಗೆ ನಾನು ವಿದ್ಯುಚ್ಛಕ್ತಿಯನ್ನು ಒದಗಿಸುತ್ತೇವೆ ಎಂದು ಹೇಳಿ ಕೆ.ಇ.ಬಿ.ಗೆ ಹಣವನ್ನು ಕೊಟ್ಟು, ಇವತ್ತಿನ ದಿವಸ ಒಳ್ಳೆಯ ಕಾರ್ಯ ನಡೆಯುತ್ತಿದೆ. ಅದನ್ನು ಅಭಿನಂದಿಸಬೇಕು. ಅದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಅದೇ ರೀತಿ ರಿಲೀಫ್ ಕಾಮಗಾರಿಗಳು ನಡೆಯುತ್ತಿವೆ. ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ನಾವು ಇಷ್ಟೆಲ್ಲಾ ಕುಡಿಯುವ ನೀರಿನ ಬಗ್ಗೆ ಮಾತನಾಡಿದ್ದೇವೆ. ಆದರೆ ಕುಡಿಯುವ ನೀರಿನ ಬಗ್ಗೆ ನಿಜವಾಗಿ ಹೇಳಬೇಕೆಂದರೆ ತಮಗೆ ಗೊತ್ತಿರುವ ಹಾಗೆ, ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಅದರಲ್ಲೂ ನಮ್ಮ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1981 ರಿಂದ ಸರಿಯಾದ ರೀತಿಯಲ್ಲಿ ಮಳೆಯಾಗಿಲ್ಲ. 1983 ರಲ್ಲಿ ಏಳು ಇಂಚು ಮಳೆಯಾಗಿದೆ. 1985ರಲ್ಲಿ ಕೇವಲ 7.4 ಇಂಚ್ ಮಳೆಯಾಗಿದೆ. ಇನ್ನು ಉಳಿದಂತೆ ನಾಲ್ಕು ಅಥವಾ 5 ಇಂಚು ಮಳೆಯಾಗಿದೆ. ಇಂಥ ಒಂದು ಭೀಕರ ಬರಗಾಲಕ್ಕೆ ತುತ್ತಾಗಿರತಕ್ಕಂಥ ಪ್ರದೇಶದಲ್ಲಿ ಕೂಡ ಸುಮಾರು ನೂರಾರು ಕೊಳವೆಬಾವಿಗಳನ್ನು ಕೊರೆಸಿದ್ದಾರೆ. ಇನ್ನು ನೂರಾರು ಕೊಳವೆ ಬಾವಿಗಳನ್ನು ಕೊರೆಸಬೇಕಾದ್ದು ಇದೆ. ಆದರೆ ಅದಕ್ಕೆ ಹಣವನ್ನು ಒದಗಿಸರತಕ್ಕಂಥದ್ದನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇವತ್ತು ರಿಲೀಫ್ ಕಾಮಗಾರಿಗಳು ಎಲ್ಲಾ ತಾಲ್ಲೂಕುಗಳಲ್ಲೂ ನಡೆಯುತ್ತಿರುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಜನಗಳಿಗೆ ಸಾಕಾದಷ್ಟು ಅಥವಾ ಎಲ್ಲರನ್ನೂ ಸ್ಯಾಟಿಸ್‌ಫೈ ಮಾಡತಕ್ಕಂಥ ರೀತಿಯಲ್ಲಿ ಅಷ್ಟೂ ಕೆಲಸಗಳನ್ನು ಮಾಡುವುದಕ್ಕೆ ಸಾಕಾದಷ್ಟು ಹಣಬೇಕಾಗುತ್ತದೆ. ಸಾಕಾದಷ್ಟು ಹಣಬೇಕು ಎನ್ನುವುದಾದರೆ ಯಾವಾಗಲೂ ಕೂಡಾ ಹಣವನ್ನು ಶೇಖರಿಸತಕ್ಕಂಥ, ಇಂಟರ್‌ನಲ್ ರಿಸೋರ್‌ಸಸ್ ಮೊಬಿಲೈಜ್ ಮಾಡತಕ್ಕಂಥ ಶಕ್ತಿಯನ್ನು ಯಾವುದೇ ಸರ್ಕಾರ ಪಡೆಯದೇ ಹೋದರೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಂಥ ಸಮಯದಲ್ಲಿ ಕರ್ನಾಟಕ ರಾಜ್ಯದ ಫೈನಾನ್ಷಿಯಲ್ ಪೊಸಿಷನ್ ಏನಿತ್ತು ಎಷ್ಟು ಸಾವಿರ ಕೋಟಿ ರೂಪಾಯಿ ಸಾಲ ಇತ್ತು, ಅದನ್ನು ಇವತ್ತು ನಿಭಾಯಿಸಿ, ಕೊನೆಯ ಫಕ್ಷ ಸಂಬಳವನ್ನು ಕೊಡತಕ್ಕಂಥ ಶಕ್ತಿಯನ್ನಾದರೂ ಕೂಡಾ ಈ ಸರ್ಕಾರ ಪಡೆದಿದೆ ಎಂದು ಹೇಳಿದರೆ ಈಗ ಇಲ್ಲಿರತಕ್ಕಂಥ ಮುಖ್ಯಮಂತ್ರಿಗಳನ್ನು ಮತ್ತು ಈ ಸರ್ಕಾರದವರನ್ನು ಯಾರಾದರೂ ಕೂಡಾ ಅಪ್ರಿಷಿಯೇಟ್ ಮಾಡಬೇಕು. ಇದನ್ನು ಡಿಪ್ರಿಷಿಯೇಟ್ ಮಾಡುವುದಕ್ಕೆ ಅಥವಾ ಕ್ರಿಟಿಸೈಜ್ ಮಾಡುವುದಕ್ಕೆ ಯಾರಿಗೂ ಕೂಡಾ ಹಕ್ಕು ಇರುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿ ಇವತ್ತಿನ ದಿವಸ ಶ್ರೀಮತಿ ಇಂದಿರಾಗಾಂಧಿಯವರ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಗತಿಯೇನಾಯಿತು? ಅದರಲ್ಲಿ ಏನು ಡಿಫೆಕ್ಟ್ ಇದೆ. ಅದರ ಮೇಲೆ ಏತಕ್ಕೆ ಯಾರಾದರೂ ಕೂಡಾ ದ್ವೇಷವನ್ನು ಸಾಧಿಸಬೇಕು? ಇಂಡಿಯಾ ದೇಶದಲ್ಲಿರತಕ್ಕಂಥ ಯಾವುದೇ ಪಾರ್ಟಿಯ ಜನ ಇದ್ದರೂ ಕೂಡಾ ಈ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಬಿಟ್ಟು ಯಾವ ಕಾರ್ಯಕ್ರಮವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಎಂಥ ಹೆಸರನ್ನೇ ಕೊಟ್ಟರೂ, ಯಾವ ಹೆಸರನ್ನೇ ಕೊಟ್ಟರೂ ಕೂಡ ಅದು ಇಪ್ಪತ್ತು ಅಂಶಗಳ ಕಾರ್ಯಕ್ರಮಕ್ಕೇ ಬರುತ್ತದೆ. ಅದಕ್ಕೆ

ನೀವು ಬೇರೆ ಬೇರೆ ಹೆಸರುಗಳನ್ನು ಕೊಟ್ಟುಕೊಳ್ಳಬಹುದು. ಆದರೆ ಅದು ಏನಾಯಿತು? ಜನತಾ ಮನೆಗಳನ್ನು ಮುಂಚೆ ಕಟ್ಟಿದ ಹಾಗೆ ಹತ್ತು ವರ್ಷಗಳಿಂದಲೂ ಕಟ್ಟಿಕೊಂಡು ಬಂದಿದ್ದರೆ ಅಥವಾ ನಿವೇಶನಗಳನ್ನು ಹಂಚಿಕೊಂಡು ಬಂದಿದ್ದರೆ ಇವತ್ತು ಕರ್ನಾಟಕ ರಾಜ್ಯಕ್ಕೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಹಿಂದಿನ ಸರ್ಕಾರ ಜನತಾ ಮನೆಗಳನ್ನು ಕಟ್ಟಿಸಿ ಕೊಡದೇ ಇದ್ದುದರಿಂದ ನಿವೇಶನಗಳನ್ನು ಹಂಚದೇ ಇದ್ದುದರಿಂದ ಈ ಪರಿಸ್ಥಿತಿ ಬಂದಿದೆ. ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯತಿಗಳು ಬಂದಮೇಲೆ ಇವರು ಯಾರಿಗೆ ಜನತಾ ಮನೆಗಳನ್ನು ಕೊಟ್ಟಿದ್ದಾರೆ ಅಂದರೆ ನಮ್ಮ ಊರಿನಲ್ಲಿ ಹತ್ತು ಸಾವಿರ, ಇಪ್ಪತ್ತು ಸಾವಿರ ತೆಂಗಿನ ಕಾಯಿಗಳನ್ನು ಕೆಡವತಕ್ಕಂಥವರಿಗೆ ಕೊಟ್ಟಿದ್ದಾರೆ. ಅವರು ಜನತಾ ಮನೆಗಳನ್ನು ತೆಗೆದುಕೊಂಡು ದನಗಳನ್ನು ಕಟ್ಟಿಕೊಳ್ಳುವಂಥ ವ್ಯವಸ್ಥೆಯನ್ನು ಅಲ್ಲಿ ಮಾಡಿದ್ದಾರೆ. ಇವರು ಜನತಾಮನೆಗಳನ್ನು ಹರಿಜನ-ಗಿರಿಜನರಿಗೆ ಕೊಟ್ಟಿಲ್ಲ. ಬಡವರಿಗೆ ಕೊಟ್ಟಿಲ್ಲ. ಒಂದು ಅನ್ಯಾಯ ನಡೆದಿದೆ. ಅಲ್ಲಿರತಕ್ಕಂಥ ಸದಸ್ಯರುಗಳೇ ಎರಡೆರಡು-ಮೂರು-ಮೂರು ಮನೆಗಳನ್ನು ಹಂಚಿಕೊಂಡರು. It is an open fact. I am not telling a lie.

ಯಾರೇ ಆಗಲಿ ಜನಹಿತ ಕಾರ್ಯಗಳನ್ನು ಸರಿಯಾಗಿ ಮಾಡಿಕೊಂಡು ಬಂದಿದ್ದರೆ ಇವತ್ತು ಈ ದುಸ್ಥಿತಿಗೆ ಕರ್ನಾಟಕ ರಾಜ್ಯ ಬರುತ್ತಿರಲಿಲ್ಲ.

ಶ್ರೀ ಆರ್.ಎನ್. ನಾಯಕ್ : ಜನತಾ ಮನೆಗಳನ್ನು ಪಡೆದುಕೊಂಡು ಅಲ್ಲಿ ದನಗಳನ್ನು ಕಟ್ಟಿದ್ದಾರೆ ಎಂದು ಹೇಳಿದಿರಿ, ಅವರು ಪ್ರಾಣಿದಯಾ ಸಂಘದವರು. ಹಾಗಾಗಿ ಪ್ರಾಣಿಗಳಿಗೆ ಒಂದು ಮನೆ ಇರಲಿ ಎಂಬ ಕಾರಣಕ್ಕಾಗಿ ಅವರು ಜನತಾ ಮನೆಗಳನ್ನು ತಗೆದುಕೊಂಡು ದನಗಳು ಕೂಡಾ ಆರಾಮವಾಗಿರಲಿ ಎಂದು ಕಟ್ಟಿದ್ದಾರೆ.

ಡಾ ಎನ್.ಬಿ. ನಂಜಪ್ಪ : ಹೀಗೆ ಜನಹಿತ ಕಾರ್ಯಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಏತಕ್ಕೆ ಈ ಡಿಫೆಕ್ಟ್ ಆಯಿತು? ಯಾವಾಗ ನಾವು ಮನೆಗೊಂದು ಕೆಲಸವನ್ನು ಕೊಡುತ್ತೇವೆ ಎಂದು ಹೇಳಿ, ಆಮೇಲೆ ಏನಾದರೂ ಮಾಡಿ ನಮ್ಮ ಪಾರ್ಟಿಯನ್ನು ಕಟ್ಟಿಕೊಳ್ಳಬೇಕು ಎಂದು ಹೇಳಿ, ಯಾರ್ಯಾರಿಗೋ ಅಂದರೆ ಕೆಳಮಟ್ಟದವರಿಗೆಲ್ಲಾರಿಗೂ ಕೂಡಾ ಅಧಿಕಾರವನ್ನುಕೊಟ್ಟು ಅವರು ಸಂಪೂರ್ಣವಾಗಿ ಇದನ್ನು ಮಿಸ್ ಯೂಸ್ ಮಾಡಿದ್ದರಿಂದ ಈ ಗತಿ ಅಡ್ಮಿನಿಸ್ಟ್ರೇಷನ್‌ಗೆ ಬಂತು. ಇವತ್ತು ಅಡ್ಮಿನಿಸ್ಟ್ರೇಷನ್ ಹಾಳಾಗಿದ್ದರೆ ಯಾವಾಗಿನಿಂದ ಹಾಳಾಗಿದೆ ಇವತ್ತು ಸುಮಾರು 8-10 ವರ್ಷಗಳ ಅಡ್ಮಿನಿಸ್ಟ್ರೇಷನ್‌ನ್ನು ತೆಗೆದುಕೊಂಡರೆ, it has gone to the dogs, we can say, if you go even to Revenue Department at the taluka level or district level or even to the secretariat level.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಸದಸ್ಯರು ಭಾಷಣ ಮಾಡುತ್ತಾ ಕೆಳಮಟ್ಟದವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳಿದರು, ಕೆಳಮಟ್ಟದವರು ಅಂದರೆ ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದು ರೆಕಾರ್ಡಿಗೆ ಹೋಗಿದೆ. ಯಾರು ಕೆಳಮಟ್ಟದವರೆಂದು ಗೊತ್ತಾಗಬೇಕು. ಮಾನ್ಯ ಸದಸ್ಯರು ಮಾತನಾಡುವಾಗ ಜನತಾ ಮನೆಗಳನ್ನು ಇವರು ಅಧಿಕಾರಕ್ಕೆ ಬಂದಮೇಲೆ ಹರಿಜನ ಗಿರಿಜನರಿಗೆ ಕೊಡಲಿಲ್ಲ. ಸದಸ್ಯರಾಗಿ ಅವರವರೇ ಹಂಚಿಕೊಂಡು ಬಿಟ್ಟರು ಎಂದು ಹೇಳುತ್ತಿದ್ದಾರೆ. ಆ ಮೇಲೆ ಕೆಳಮಟ್ಟದವರಿಗೆ ಅಧಿಕಾರವನ್ನು ಕೊಟ್ಟರು ಎಂದು ಹೇಳಿದ್ದಾರೆ. ಯಾರು ಕೆಳಮಟ್ಟದವರೆಂದು ಪೇಳಬೇಕು.

ಡಾ. ಎನ್.ಬಿ. ನಂಜಪ್ಪ : ಕೆಳಮಟ್ಟ ಎಂದರೆ, ಮೇಲಿಂದ ಕೆಳಮಟ್ಟ ಎಂದು ಕರೆಯುತ್ತೇವೆ. ಪ್ರೆಸಿಡೆಂಟ್ ಆಗಿರುವವನು ಮೇಲಿದ್ದಾನೆ. ಅದೇ ಪಾರ್ಟಿಯಲ್ಲಿ ಒಬ್ಬ ವರ್ಕರ್ಸ್ ಅಥವಾ ಲೀಡರ್ ಅಥವಾ ಸದಸ್ಯ ಅಥವಾ ಯಾರೋ ಒಬ್ಬ ಡೈರೆಕ್ಟರ್ ಇರುತ್ತಾರೆ. ಇಂತಹವರಿಗೆ ನ್ಯಾಯಬೆಲೆ ಅಂಗಡಿ ಸಿಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಅಭಿಪ್ರಾಯದಲ್ಲಿ ಕಾರ್ಯಕರ್ತರು ಕೆಳಮಟ್ಟ ಎಂತಲೇ ?

(ಗೊಂದಲ)

ಉಪಾಧ್ಯಕ್ಷರು : ಅವರು ಪೂರ್ತಿ ಹೇಳಿಲ್ಲ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಕೆಳಮಟ್ಟ ಅಂದರೆ ಯಾವುದು?

(ಗೊಂದಲ)

ಡಾ : ಎನ್.ಬಿ. ನಂಜಪ್ಪ : ಮೇಲೆ ಇರತಕ್ಕವರು ಕೆಳಗೆ ಇರತಕ್ಕವರು ಅಂದರೆ ಆಯಾ ಶ್ರೇಣಿ ಇರುತ್ತದೆ. ಈಗ ಏಣಿ ಇರುತ್ತದೆ. ಆ ಏಣಿಯಲ್ಲಿ ಮೇಲ್ಗಡೆ ಮೆಟ್ಟಿಲು ಇರುತ್ತದಲ್ಲ ಅದು ಮೇಲ್ಮಟ್ಟ, ಕೆಳಗಡೆ ಮೊದಲನೆ ಮೆಟ್ಟಿಲು ಇರುತ್ತದಲ್ಲ ಅದು ಕೆಳಮಟ್ಟ.

ಶ್ರೀ ವಾಟಾಳ್ ನಾಗರಾಜ್ : ಏಣಿ ಇಲ್ಲದೆ ಮೇಲೇ ಹತ್ತುವುದು ಆಗುವುದಿಲ್ಲ.

ಡಾ: ಎನ್.ಬಿ. ನಂಜಪ್ಪ : ಆ ಶ್ರೇಣಿಯಲ್ಲಿ ಪಾರ್ಟಿ ವರ್ಕರ್ಸ್ ಯಾರು ಇರುತ್ತಾರೋ ಅವರನ್ನು ಮೇಲ್ಮಟ್ಟ, ಕೆಳಮಟ್ಟ ಎಂದು ಹೇಳಿದನೇ ಹೊರತು ಕೆಳಮಟ್ಟ ಅಂದರೆ ಬಹಳ ಕೀಳಾಗಿ ಕಾಣುವಂತಹದ್ದು ಅಲ್ಲ. ಪಾರ್ಟಿ ವರ್ಕರ್ಸ್‌ನಲ್ಲಿ ಮೇಲೆ ಮುಖ್ಯಮಂತ್ರಿಯಿಂದ ಹಿಡಿದು ಕೆಳಗಡೆ ಇರತಕ್ಕಂತಹ ಬೇಸಿಕ್ ವರ್ಕರ್ಸ್ ಯಾರಿದ್ದಾರೊ ಅವರನ್ನು ಬೆಳಿಸಬಹುದು ಎಂದು ಕೆಲವು ಅನ್ಯಾಯಗಳು ನಡೆದಿದ್ದರಿಂದ ಈ ಪರಿಸ್ಥಿತಿ ಆಯಿತು ಎಂದು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ನಂಜಪ್ಪನವರೇ ಈಗ 6 ಗಂಟೆಯಾಗಿದೆ, ತಾವು ಇನ್ನು 5-10 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ.

ಡಾ : ಎನ್.ಬಿ. ನಂಜಪ್ಪ : ಅದು ಸಾಧ್ಯವಿಲ್ಲ. ಏತಕ್ಕೆಂದರೆ.....

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಅವರಿಗೆ ಟೈಂ ಕೊಡಿ, ಕೆಳಮಟ್ಟಕ್ಕೆ ಹೋಗಲಿ.

ಡಾ. ಎನ್.ಬಿ. ನಂಜಪ್ಪ : ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು 8 ದಿವಸಗಳಿಂದಲೂ ಜಾತಕ ಪಕ್ಷಿಗಳಂತೆ ಕಾಯ್ದುಕೊಂಡು ಈ ಸೀಟಿನಲ್ಲಿ ಕುಳಿತಿದ್ದೇವೆ. ಸುಮ್ಮನೆ ಬಂದು ಸುಮ್ಮಸುಮ್ಮನೆ ಮಾತನಾಡುವುದಕ್ಕೆ ಅಥವಾ ಬೇರೆಯವರ ಹಾಗೆ ವಿಷಯ ಇಲ್ಲದೆ ಮಾತನಾಡುವುದಕ್ಕೆ ನಾವು ಇಷ್ಟಪಡುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಉಪಾಧ್ಯಕ್ಷರೆ,....

ಉಪಾಧ್ಯಕ್ಷರು : ಅವರು ಈಲ್ಡ್ ಆಗಿಲ್ಲ.

ಡಾ. ಎನ್.ಬಿ.ನಂಜಪ್ಪ : ತಾವು ಅವಕಾಶ ಮಾಡಿಕೊಟ್ಟರೆ ಮಾತನಾಡುತ್ತೇನೆ. ಬೇಡ ಅನ್ನುವುದಾದರೆ ಬೇಡ, ಮಾತನಾಡಲೇಬೇಕೆನ್ನುವ ಇಚ್ಛೆ ನನಗೆ ಇಲ್ಲ. ನನಗೆ ಕೆಲವು ವಿಷಯಗಳನ್ನು ತಿಳಿಸಬೇಕೆನ್ನುವ ಆಸೆ ಇದೆ.

ಉಪಾಧ್ಯಕ್ಷರು : ತಾವು ವಿಷಯಕ್ಕೆ ಬನ್ನಿ.

ಡಾ. ಎನ್.ಬಿ. ನಂಜಪ್ಪ : ತಾವು ಮಾತನಾಡಿ ಎಂದರೆ ಮಾತನಾಡುತ್ತೇನೆ. ಇಲ್ಲ ಅಂದರೆ ಈಗಲೇ ಕುಳಿತುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ವೀರಪ್ಪ ಮೊಯಿಲಿಯವರು ಕೋಲಾರ ಜಿಲ್ಲೆಯಲ್ಲಿ ಇರತಕ್ಕಂತಹ ವಿದ್ಯುತ್ ಪರಿಸ್ಥಿತಿಯ ಬಗ್ಗೆ ಹೇಳಿಕೆ ಕೊಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದರು. ಅದಕ್ಕೆ ತಾವೂ ಕೂಡ ಸಮ್ಮತಿಯನ್ನು ಸೂಚಿಸಿದ್ದೀರಿ. ಆ ಹೇಳಿಕೆ ಇವತ್ತು ಬರುತ್ತಿಲ್ಲ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಈಗ ಕೌನ್ಸಿಲ್‌ನಲ್ಲಿ ಅವರ ಸಬ್ಜೆಕ್ಟ್ ಇರುವುದರಿಂದ ಅಲ್ಲಿದ್ದಾರೆ. ಅವರು ಇವತ್ತು ಇಲ್ಲಿಗೆ ಬರುವುದಿಲ್ಲ . ನಾಳೆ ದಿವಸ ತಾವು ಆ ವಿಷಯವನ್ನು ಎತ್ತಿ.

ಶ್ರೀ ವಾಟಾಳ್ ನಾಗರಾಜ್ : ಸಭೆ ಎಷ್ಟು ಹೊತ್ತು ಕುಳಿತುಕೊಳ್ಳುತ್ತದೆಂದು ಗೊತ್ತಾಗಿಲ್ಲ.

ಉಪಾಧ್ಯಕ್ಷರು : ನಾವು 3-30ಕ್ಕೆ ಶುರುಮಾಡಿದ್ದೇವೆ. 6-15ಕ್ಕೆ ಮುಗಿಸೋಣ.

ಡಾ. ಎನ್.ಬಿ. ನಂಜಪ್ಪ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಮಧ್ಯೆ ಮಧ್ಯೆ ಪ್ರವೇಶ ಮಾಡುವುದು ಬೇಡವೆಂದು ಹೇಳಿ.

ಉಪಾಧ್ಯಕ್ಷಿಣಿಯವರು : ಅವರು ಯಾವಾಗಲೂ ಯಾರಿಗೂ ಮಧ್ಯೆ ಮಧ್ಯೆ ಪ್ರವೇಶ ಮಾಡುವುದಿಲ್ಲ.

ಡಾ: ಎನ್.ಬಿ. ನಂಜಪ್ಪ : ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ವರ್ಷಗಳ ಹಿಂದೆ ವಿದ್ಯುಚ್ಛಕ್ತಿ ಬಹಳ ಹೇರಳವಾಗಿತ್ತು. ನನಗೆ ಗೊತ್ತಿರುವ ಹಾಗೆ, ಆ ಕಾಲದಲ್ಲಿ ಕಲ್ಕತ್ತಾ, ಬೊಂಬಾಯಿಗೆ ಹೋಗಿ ನೀವು ಇಲ್ಲಿ ಬಂದು ಇಂಡಸ್ಟ್ರೀಸ್ ಪ್ರಾರಂಭ ಮಾಡಿ ನಮ್ಮಲ್ಲಿ ಬಹಳಷ್ಟು ಅನುಕೂಲ ಮಾಡಿಕೊಡುತ್ತೇವೆ ಕನ್ಸೇಷನ್ ಕೊಡುತ್ತೇವೆಂದು ಹೇಳಿ ಇಂಡಸ್ಟ್ರಿಯಲಿಸ್ಟ್ಸ್‌ನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಇಂಡಸ್ಟ್ರೀಸ್ ಪ್ರಾರಂಭ ಮಾಡಿದ ದಿವಸ ಈ ಕರ್ನಾಟಕ ರಾಜ್ಯದಲ್ಲಿ ಇತ್ತು. ಇವೊತ್ತಿನ ದಿವಸ ಏನಾಗಿದೆ, ಇದಕ್ಕೆ ಕಾರಣವಾದರೂ ಏನು ಎಂದು ಯೋಚನೆ ಮಾಡಿದರೆ ಇಲ್ಲಿ ಜವಾಬ್ದಾರಿಯುತವಾಗಿ ಕೆಲಸಮಾಡಿದಂಥ ಸರ್ಕಾರವಾಗಲಿ, ಮುಖ್ಯಮಂತ್ರಿಗಳಾಗಲೀ ಇದರ ಬಗ್ಗೆ ಚಿಂತನೆ ಮಾಡಿ ಕೈಗಾ ಪ್ರಾಜೆಕ್ಟ್ ಮಾಡಬೇಕೆಂದು ಹೇಳಿದಾಗ, ಪುಸ್ತಕ ಬರೆಯತಕ್ಕಂಥವರು ಈ ಟೆಕ್ನಿಕಲ್ ಪೀಪಲ್, ಈ ಟೆಕ್ನಾಲಿಟಿ ಬಂದಂಥ ಸಂದರ್ಭದಲ್ಲಿ ನಮ್ಮ ದೇಶದಲ್ಲಿ ಏನಾಗಿದೆಯೆಂದರೆ ಯಾರು ಟೆಕ್ನಿಕಲ್ ಪೀಪಲ್ ಇದ್ದಾರೆ ಅವರಿಗೆ ನಾವು ಆ ಸಬ್ಜೆಕ್ಟ್‌ನ್ನು ಬಿಡುವುದಿಲ್ಲ, ಕೈಗಾದಲ್ಲಿ ಅಣುಸ್ಥಾವರ ಪ್ರಾರಂಭ ಮಾಡಬೇಕೆಂದು ಹೇಳಿದಾಗ ಕತೆ ಬರೆಯತಕ್ಕಂಥವರು, ಪಕ್ಕದಲ್ಲಿರತಕ್ಕಂಥವರು, ರೋಡಿನಲ್ಲಿ ಓಡಾಡತಕ್ಕಂಥವರು ಎಲ್ಲರೂ ಇದನ್ನು ಮಾಡಕೂಡದು ಎಂದು ಅಬ್ಜಕ್ಷನ್ಸ್ ಮಾಡಿದ್ದಾರೆ. ಇನ್ನೊಂದು ಕಡೆ ಇನ್ನೊಂದು ಏನಾದರೂ ಮಾಡೋಣ ಅಂದರೆ ಅಲ್ಲಿ ಕಾಡು ನಾಶವಾಗುತ್ತದೆ. ಅದನ್ನು ಮಾಡಬಾರದು ಎಂದು ಹೇಳುವುದು ಆಗುತ್ತಿದೆ ನಮ್ಮ ದೇಶದಲ್ಲಿ ಏನಾಗಿದೆಯೆಂದರೆ ನಾವು ಅದನ್ನು ಪ್ರಾರಂಭ ಮಾಡಿದ ದಿವಸವೇ ಕೈಗಾವನ್ನು ಪ್ರಾರಂಭ ಮಾಡಿದ್ದರೆ ಇವೊತ್ತಿಗೆ ಎಲೆಕ್ಟ್ರಿಸಿಟಿ ಪ್ರೊಡ್ಯೂಸ್ ಮಾಡತಕ್ಕಂಥ ಒಂದು ಶಕ್ತಿಯನ್ನು ಪಡೆಯಬಹುದಿತ್ತು.

ಮಹಾರಾಷ್ಟ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ಅವರೆಲ್ಲರೂ ಕೂಡ ಮೊದಲೇ ಪ್ರಾರಂಭ ಮಾಡಿದ್ದರು ಮಹಾರಾಷ್ಟ್ರದಲ್ಲಿ ಅಣುಸ್ಥಾವರ ಕೇಂದ್ರ ಇರಬಹುದು,

ತಮಿಳುನಾಡಿನಲ್ಲಿ ಇರಬಹುದು, ಆದರೆ ಕರ್ನಾಟಕದಲ್ಲಿ ಮಾತ್ರ ಇರಕೂಡದು. ಇಂತಹ ಸಂಕುಚಿತ ಮನೋಭಾವನೆಯನ್ನು ಬಿಟ್ಟು ಆದಷ್ಟು ಬೇಗ ಈ ಒಂದು ಎಲೆಕ್ಟ್ರಿಸಿಟಿಯನ್ನು ಪ್ರೊಡ್ಯೂಸ್ ಮಾಡಲಿಕ್ಕೆ ಎಲ್ಲಾ ತರಹದ ಕಾರ್ಯಕ್ರಮಗಳನ್ನು ಇವೊತ್ತು ನಮ್ಮ ಸರ್ಕಾರ ಹಾಕಿಕೊಂಡಿದೆ. ಅದು ನಮ್ಮ ರಾಜ್ಯಪಾಲರ ಭಾಷಣದಲ್ಲಿರುವುದರಿಂದ, ಇವರನ್ನು ನಿಜವಾಗಿ ನಾವು ಅಭಿನಂದಿಸಬೇಕು. ಈಗ ಲೇಟ್ ಆಗಿದ್ದರೂ ಕೂಡ ಆದಷ್ಟು ಬೇಗ ಈ ಕೆಲಸ ಪ್ರಾರಂಭವಾಗಬೇಕು. ಆ ರೀತಿ ಮಾಡಿದರೆ ಮಾತ್ರ ಕರ್ನಾಟಕದ ಜನತೆಗೆ ಮುಕ್ತಿ ಸಿಕ್ಕಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ಮತ್ತು ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಬಗ್ಗೆ ಮಾತನಾಡುತ್ತಾರೆ. ಇವೊತ್ತು ಕರ್ನಾಟಕದಲ್ಲಿರತಕ್ಕಂಥ ಕೊಳವೆಬಾವಿಗಳಿಗೆ ಸರ್ಕಾರ ವಿದ್ಯುಚ್ಛಕ್ತಿ ಒದಗಿಸತಕ್ಕಂಥ ಶಕ್ತಿಯನ್ನು ಪಡೆದಿದ್ದೇ ಆದರೆ, ಅವರಿಗೆ ಯಾವ ಎಂಪ್ಲಾಯ್‌ಮೆಂಟ್‌ನ್ನೂ ಕೂಡ ಕೊಡಬೇಕಾಗಿಲ್ಲ, ತಾವು ಯಾರಿಗೂ ಕೆಲಸ ಕೊಡಬೇಕಾಗಿಲ್ಲ.ಈ ರೀತಿ ಮಾಡಿದರೆ ಒಂದೇ ಸಲ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆ. ಈ ವಿಚಾರವನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ತಾಲ್ಲೂಕಿನಲ್ಲಿ 3,750 ಬಾವಿಗಳು ಇವೆ. ಈಗ ನಮ್ಮ ತಾಲ್ಲೂಕಿನ 300 ಹಳ್ಳಿಗಳಿಗೂ ವಿದ್ಯುಚ್ಛಕ್ತಿ ಕೊಟ್ಟಿದ್ದೇ ಆದರೆ, ಅವರು ಯಾರೂ ಕೂಡ ತಮ್ಮಲ್ಲಿ ಕೆಲಸ ಕೇಳುವುದಕ್ಕೆ ಬರುವುದಿಲ್ಲ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಬಿಎ,ಫೈಲಾದವರೂ ಯಾರೂ ಕೂಡ ನಿಮ್ಮ ಹತ್ತಿರ 250-500 ರೂಪಾಯಿ ಕೆಲಸಕ್ಕೆ ಬರುವುದಿಲ್ಲ. ಆದ್ದರಿಂದ, ತಾವು ಬೇಸಿಕ್‌ಆಗಿ ಯೋಚನೆ ಮಾಡಬೇಕು. ನಮ್ಮದು ಅಗ್ರಿಕಲ್ಚರ್ ಬೇಸ್ಡ್ ಕಂಟ್ರೀ ಆಗಿರುವುದರಿಂದ ನಾವು ಬೇಸಿಕ್ ಆಗಿ ವಿದ್ಯುಚ್ಛಕ್ತಿ ಬಗ್ಗೆ ಏನೇನು ಅನುಕೂಲಗಳನ್ನು ಮಾಡಿಕೊಡಬೇಕೋ ಅದನ್ನು ಮಾಡಿಕೊಡಬೇಕು. ಸಾಲ ಮನ್ನಾ ಮಾಡುವುದೇ ಅಲ್ಲ, ಒಂದು ಊರಿನಲ್ಲಿ ಮೂರು ಜನರಿಗೆ ಸಾಲ ಮನ್ನಾ ಮಾಡಿದರೆ, ಅಗ್ರಿಕಲ್ಚರಿಸ್ಟ್‌ಗೆ ಸಹಾಯ ಮಾಡಿದಂತಾಗುವುದಿಲ್ಲ, ನಮ್ಮ ಊರಿನಲ್ಲಿ 150ಮನೆಗಳು ಇವೆ, ಅದರಲ್ಲಿ 10ಜನರು ಸಾಲ ತೆಗೆದುಕೊಂಡಿದ್ದಾರೆ. ಆ 10 ಜನರ ಸಾಲ ಮನ್ನಾ ಮಾಡಿದರೆ 150ಜನರು ಐಶ್ವರ್ಯವಂತರಾಗಲಿಕ್ಕೆ ಸಾಧ್ಯವಿಲ್ಲ, ಸಾಲವನ್ನು ತೆಗೆದುಕೊಂಡಿರತಕ್ಕವರೆಲ್ಲರೂ ಕೂಡ ಶ್ರೀಮಂತರೇ ಇದ್ದಾರೆ. ಇವೊತ್ತು ಪ್ರತಿಯೊಬ್ಬ ರೈತನಿಗೂ ಸಹಾಯ ಆಗಬೇಕೆಂದು ಹೇಳುವುದಾದರೆ, ನೀರಾವರಿ ಹೆಚ್ಚು ಮಾಡತಕ್ಕಂಥದ್ದು, ವಿದ್ಯುಚ್ಛಕ್ತಿ ಒದಗಿಸತಕ್ಕಂಥದ್ದು, ಸಬ್ಸಿಡೈಸ್ಡ್ ಅಗ್ರಿಕಲ್ಚರ್ ಇನ್‌ಪುಟ್ಸ್ ಕೊಡತಕ್ಕದ್ದು. ಈ ರೀತಿ ಬೇಸಿಕ್ ನೆಸೆಸಿಟಿಸನ್ನು ರೈತರಿಗೆ ಮಾಡಿಕೊಟ್ಟರೆ ನಮಗಿರತಕ್ಕ ಕಷ್ಟ ಪರಿಹಾರವಾಗುತ್ತದೆಯೇ ವಿನಹ ನಾವು ಯಾವುದೋ ಹತ್ತು ಜನರಿಗೆ ಸಾಲ ಮನ್ನಾ ಮಾಡಿದರೆ, ನಮ್ಮ ರೈತರಿಗೆ ಒಳ್ಳೆಯದನ್ನು ಮಾಡಿದಂತಾಗುವುದಿಲ್ಲ, ಮಾನ್ಯ ಸದಸ್ಯರು ಕೆಲವರು ರೈತರ ಬಗ್ಗೆ ಚಿಂತನೆ ಮಾಡುತ್ತಿಲ್ಲ ಎಂದು ಹೇಳುತ್ತಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಮಗೆ ಬಹಳ ದುಃಖವಾಗುತ್ತದೆ. ನಾವೆಲ್ಲರೂ ಹಳ್ಳಿಯಿಂದಲೇ ಬಂದಿರುವವರೆ, ನಮ್ಮಲ್ಲಿ ಹೆಚ್ಚಿನ ಜನರು ರೈತಾಪಿಗಳು ಮತ್ತು ಲ್ಯಾಂಡ್‌ಹೋಲ್ಡರ್ಸ್, ಜಮೀನು ದೊಡ್ಡದಾಗಿರಬಹುದು ಅಥವಾ ಚಿಕ್ಕದಾಗಿರಬಹುದು. ಇವೊತ್ತು ರೈತರ ಬೇಸಿಕ್ ನೆಸಿಸಿಟೀಸ್ ಏನು ಎಂದು ನಮಗೆಲ್ಲರಿಗೂ ಗೊತ್ತಿದೆ, ರೈತರ ಕಷ್ಟ ಏನೆಂದು ನಮಗೆ ಗೊತ್ತಿದೆ. ಆದರೆ ನಾವು ಪ್ರತಿಯೊಬ್ಬರೂ ಕೂಡ ರೈತರ ಬಗ್ಗೆ ಮೊಸಳೆ ಕಣ್ಣೀರು ಸುರಿಸಿ, ರೈತ ಹಾಗೆ ಆಗಿದ್ದಾನೆ, ಹೀಗೆ ಆಗಿದ್ದಾನೆ ಎಂದು ಹೇಳುವಂಥಾದ್ದು ಆಗುತ್ತಿದೆಯೇ ಹೊರತು ಅವನಿಗೆ ಏನೂ ಮಾಡಿಲ್ಲ. ಬೇಸಿಕ್ ಆಗಿ ಹೇಳಬೇಕೆಂದರೆ, ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದ ಇಲ್ಲಿಯವರೆಗೆ, ನಾವು ಅಗ್ರಿಕಲ್ಚರ್‌ಗೆ ಕೊಟ್ಟಿರತಕ್ಕಂಥ ಇಂಪಾರೆಟಿನ್ಸ್‌ನ್ನೂ ಪ್ರಪಂಚದ ಯಾವುದೇ ರಾಷ್ಟ್ರದಲ್ಲಿ 200 ವರ್ಷಗಳಿಂದಲೂ ಕೊಟ್ಟಿಲ್ಲ.

ಆಸ್ಟ್ರೇಲಿಯಾಕ್ಕೆ ಸ್ವಾತಂತ್ರ್ಯ ಬಂದು 200 ವರ್ಷಗಳಾಗಿದೆ, ಅಮೆರಿಕಾ ದೇಶಕ್ಕೆ ಸ್ವಾತಂತ್ರ್ಯ ಬಂದು 200 ವರ್ಷಗಳಾಗಿದೆ, ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳಷ್ಟು ದೇಶಗಳಿಗೆ ಸ್ವಾತಂತ್ರ್ಯ ಬಂದು 200 ವರ್ಷಗಳಾಗಿದೆ. ಆದರೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇನ್ನೂ ಕೇವಲ 43 ವರ್ಷಗಳಾಗಿದೆ. ಯಾವುದೇ ಇಂಟರ್‌ನ್ಯಾಷನಲ್ ಮಾನಿಟರಿ ಆರ್ಗನೈಸೇಷನ್ಸ್ ನಮ್ಮ ದೇಶದಲ್ಲಿ ಆಗಿರತಕ್ಕ ಅಭಿವೃದ್ಧಿಯನ್ನು ನೋಡಿ ಅವರು ಮನಃಪೂರ್ವಕವಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ನಾವು ಕೇವಲ ವೋಟಿಗೊಸ್ಕರ ನಮಗೆ ವಿರುದ್ಧವಾಗಿದ್ದರೆ ನಾವು ಒಪ್ಪಿಕೊಳ್ಳುವುದಿಲ್ಲ. ಅಂದರೆ ನಾವು ವಿರೋಧಪಕ್ಷದಲ್ಲಿದ್ದರೆ ಆಡಳಿತ ಪಕ್ಷದವರು ಮಾಡಿದ್ದನ್ನು ಒಪ್ಪಿಕೊಳ್ಳುವುದಿಲ್ಲ, ಅದೇರೀತಿ ನಾವು ಆಡಳಿತ ಪಕ್ಷದಲ್ಲಿದ್ದು ಅವರು ವಿರೋಧಪಕ್ಷದಲ್ಲಿದ್ದರೆ ನಾವು ಮಾಡಿದ್ದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಈ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿದೆ. ನಿಜವಾದುದನ್ನು ನಿಜ ಎಂದು ಒಪ್ಪಿಕೊಳ್ಳಬೇಕು. 1947ನೇ ಇಸವಿಯಲ್ಲಿ ಅಥವಾ 1956ರಲ್ಲಿ ನಮಗೆ ಏನಿತ್ತು? I have read yesterday in the India Today. To-day India has got surplus food. We are prepared to export wheat and rice.

ನಮಗೆ ಬೇಕಾದಷ್ಟನ್ನು ಶೇಖರಣೆ ಮಾಡಿಕೊಂಡು, ಇಷ್ಟು ಬರಗಾಲವಿದ್ದರೂ ಕೂಡ ಇಂಡಿಯಾ ದೇಶದಲ್ಲಿ ಎಕ್ಸೆಸ್ ಫುಡ್‌ಗ್ರೈನ್ಸ್ ಇದೆ.

ಶ್ರೀ ಸಿ. ಬೈರೇಗೌಡ : ಎಷ್ಟು ಹೆಚ್ಚಿಗೆ ಇದೆ.

ಡಾ: ಎನ್.ಬಿ. ನಂಜಪ್ಪ : ಇದನ್ನು ನಾಳೆ ಹೇಳುತ್ತೇನೆ. ಇವತ್ತು ಪುಸ್ತಕವನ್ನು ತಂದಿಲ್ಲ.

You see India Today. I do not want to mug up. I do not want to bring lot of books and pages.

ಅದು ನನ್ನ ಹತ್ತಿರ ಇದೆ. I will produce it to you tomorrow.

ಇವತ್ತು ಎಷ್ಟನ್ನು ಎಕ್ಸ್‌ಪೋರ್ಟ್ ಮಾಡತಕ್ಕ ಶಕ್ತಿಯನ್ನು ನಾವು ಪಡೆದುಕೊಂಡಿದ್ದೇವೆಂಬುದನ್ನು ನಾಳೆ ತಮಗೆ ಹೇಳುತ್ತೇನೆ. ನಾವು ಅಗ್ರಿಕಲ್ಚರ್‌ಗೆ ಪ್ರಾಮುಖ್ಯತೆಯನ್ನು ಕೊಡದೇ ಹೋಗಿದ್ದರೆ, ಬೇಸಿಕ್ ನೆಸಿಸಿಟೀಸ್ ಫುಲ್‌ಫಿಲ್ ಮಾಡದೇ ಹೋಗಿದ್ದರೆ, ಇಂಡಿಯಾ ದೇಶದಲ್ಲಿರತಕ್ಕ 85 ಕೋಟಿ ಜನರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸುವುದಕ್ಕೆ ಸಾಧ್ಯವಿರಲಿಲ್ಲ. I do not think any Government in India has neglected the agricultural sector. ಇದನ್ನು ಯಾರಾದರೂ ತಿಳಿದುಕೊಂಡಿದ್ದರೆ ಅದು ಕೇವಲ -- ಸುಮ್ಮನೆ ಮಾತನಾಡತಕ್ಕ ವಿಷಯ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎಜುಕೇಷನ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾವು ಎಜುಕೇಷನ್ಗೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆ. But I am against adult education. ಅದು ಯಾವುದೇ ಪಾಲಿಸಿ ಇರಬಹುದು. ಸರ್ಕಾರ ಏನೋ ಮಾಡಬೇಕೆಂದು ಮಾಡಬಹುದು. ಆದರೆ ಅದಕ್ಕೆ ಖರ್ಚುಮಾಡತಕ್ಕ ನೂರಾರು ಕೋಟಿ ರೂಪಾಯಿ ವ್ಯರ್ಥ. ಇದಕ್ಕೆ ಬದಲು ನಾವು ಪ್ರೈಮರಿ ಸ್ಕೂಲ್‌ಗಳನ್ನು ಕಟ್ಟಿಸುವುದು ಒಳ್ಳೆಯದು. ಪ್ರೈಮರಿ ಸ್ಕೂಲ್ ಉಪಾಧ್ಯಾಯರನ್ನು ನೇಮಕ ಮಾಡುವುದು ಒಳ್ಳೆಯದು. ಅಡಲ್ಟ್ ಎಜುಕೇಷನ್ ಎಂದು ಮಾಡಿ, ನಾವು ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡುತ್ತೇವೆಂದು

ಏನು ಹೇಳುತ್ತೇವೊ ಇದಕ್ಕೆ ಖರ್ಚುಮಾಡತಕ್ಕ ಎಲ್ಲ ಹಣವೂ ಕೂಡ ಸಂಪೂರ್ಣವಾಗಿ ಪೋಲಾಗುತ್ತಿದೆಯೇ ಹೊರತು ಸದುಪಯೋಗವಾಗುತ್ತಿಲ್ಲ.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಪ್ರಾರಂಭಮಾಡಬೇಕೆಂದು ನಮ್ಮ ಸರ್ಕಾರ ಹೇಳಿದೆ. ಅದನ್ನು ಮಾಡುವುದಕ್ಕೆ ಒಪ್ಪಿಕೊಂಡಿದೆ. ಆದರೆ ಒಂದು ಮಾತನ್ನು ನಾನು ನಿಸ್ಸಂದೇಹವಾಗಿ ಹೇಳಬಯಸುತ್ತೇನೆ. ಈಗ ನಮ್ಮಲ್ಲಿ ಯಾವ ಯೂನಿವರ್ಸಿಟಿಗಳಿವೆ ಅವುಗಳಿಗೆ ಈ ಕನ್ನಡ ಯೂನಿವರ್ಸಿಟಿಯನ್ನೂ ಅಟ್ಯಾಚ್ ಮಾಡಿ ಅದನ್ನೇ ಬೆಳೆಸುವುದಕ್ಕೆ ಪ್ರಯತ್ನ ಮಾಡಿದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಏಕೆಂದರೆ, Any university is an while elephant.

ಇದನ್ನು ಮೇನ್‌ಟೇನ್ ಮಾಡತಕ್ಕದ್ದು ಮುಖ್ಯ ಈಗ ಹಿಂದುಳಿದಿರತಕ್ಕ ಹಂಪಿಯಲ್ಲಿ ಈ ಯೂನಿವರ್ಸಿಟಿಯನ್ನು ಪ್ರಾರಂಭಮಾಡಿ, ಕಟ್ಟಡ ಕಟ್ಟಿ, ಬೆಂಗಳೂರಿನಲ್ಲಿ ಸುಖವಾಗಿರತಕ್ಕ ಈ ಪ್ರೊಫೆಸರ್‌ಗಳನ್ನು ತೆಗೆದುಕೊಂಡು ಹೋಗಿ ಹಂಪೆಯ ಬೋರೆಯ ಮೇಲೆ ಇಟ್ಟರೆ ಇವರು ಅಲ್ಲಿ ಎಷ್ಟರಮಟ್ಟಿಗೆ ಇರುತ್ತಾರೆ, ಎಷ್ಟರಮಟ್ಟಿಗೆ ಅದನ್ನು ಬೆಳೆಸುತ್ತಾರೆ ಎಂಬುದರಲ್ಲಿ ನನಗಂತೂ ಅನುಮಾನ ಇದೆ. ನಾನು ಈಗಾಗಲೇ ಹೇಳಿದಂತೆ, ಈಗಿರತಕ್ಕ ಯೂನಿವರ್ಸಿಟಿಗಳಿಗೆ ಇದನ್ನೂ ಸೇರಿಸಿ ಬೆಳೆಸಿದರೆ ಬಹಳ ಚೆನ್ನಾಗಿರುತ್ತಿತ್ತು, ಮತ್ತು ಈ ಹಣವನ್ನೂ ಕೂಡ ಪ್ರೈಮರಿ ಎಜುಕೇಷನ್‌ಗೆ ಖರ್ಚುಮಾಡಿದ್ದರೆ ಬಹಳಷ್ಟು ಚೆನ್ನಾಗಿರುತ್ತಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು 20 ಅಂಶಗಳ ಕಾರ್ಯಕ್ರಮವನ್ನು ನಾವು ಮರೆಯಬಾರದು. ಇದನ್ನು ನಾವು ಮುಂದುವರಿಸಿಕೊಂಡು ಹೋಗಬೇಕಾದುದು ನಮ್ಮ ಕರ್ತವ್ಯ ಎಂದು ಹೇಳಬಯಸುತ್ತೇನೆ. ಅದನ್ನು ಇದರಲ್ಲಿ ಅಳವಡಿಸಿದ್ದಾರೆ. ಆದ್ದರಿಂದ ನಾನು ಮಾನ್ಯ ರಾಜ್ಯಪಾಲರನ್ನು ಮತ್ತು ಮಾನ್ಯ ಸರ್ಕಾರದವರನ್ನೂ ಅಭಿನಂದಿಸುತ್ತೇನೆ.

ಇನ್ನು ಬೆಂಗಳೂರು ವಾಟರ್‌ಸಪ್ಲೈ ಏನಿದೆ ಇದು ಬಹಳ ದೊಡ್ಡ ಸಮಸ್ಯೆಯಾಗಿದೆ. ಆದುದರಿಂದಲೇ ನಮ್ಮ ಪ್ರೊಫೆಸರ್ ನಂಜುಂಡಸ್ವಾಮಿಯವರು ಕೊಟ್ಟಂಥ ಸಲಹೆಯನ್ನು ಒಂದೇ ಒಂದು ಮಾತಿನಲ್ಲಿ ಹೇಳುವುದಾದರೆ, ಎರಡು ಪೈಪ್‌ನಲ್ಲಿ ನೀರನ್ನು ಸಪ್ಲೈ ಮಾಡಬೇಕು. ನನಗೆ ತಿಳಿದಿರುವಂತೆ, ಕಲ್ಕತ್ತಾ ನಗರದಲ್ಲಿ ಒಂದು ಪೈಪ್‌ನಲ್ಲಿ ಫಿಲ್ಟರ್ಡ್ ವಾಟರ್‌ನ್ನು ಸಪ್ಲೈ ಮಾಡುತ್ತಾರೆ, ಇನ್ನೊಂದು ಪೈಪ್‌ನಲ್ಲಿ ಹೂಗ್ಲಿ ನದಿಯ ನೀರನ್ನು ನೇರವಾಗಿ ಪಂಪ್ ಮಾಡುತ್ತಾರೆ. ಅಂದರೆ ಈ ನೀರನ್ನು ಉಪಯೋಗ ಮಾಡತಕ್ಕದ್ದು ಎಂದರೆ, every drop of water costs something. ಇಷ್ಟು ದೊಡ್ಡ ನಗರದಲ್ಲಿ ಗಾರ್ಡನ್‌ಗೂ ಇದೇ ನೀರನ್ನೇ ಉಪಯೋಗ ಮಾಡುತ್ತಾರೆ, ಕಟ್ಟಡವನ್ನು ಕಟ್ಟುವುದಕ್ಕೂ ಇದೇ ನೀರನ್ನೇ ಉಪಯೋಗ ಮಾಡುತ್ತಾರೆ, ಮತ್ತು ಕುಡಿಯುವುದಕ್ಕೂ ಮತ್ತು ಪ್ರತಿದಿನ ಬಳಸುವುದಕ್ಕೂ ಕೂಡ ಇದೇ ನೀರನ್ನೇ ಉಪಯೋಗ ಮಾಡುತ್ತಾರೆ.

6.15 ಪಿ.ಎಂ.

ಈ ರೀತಿ ಇಂಥ ಒಂದು ದೊಡ್ಡ ಪಟ್ಟಣಕ್ಕೆ ನೀವು ಫಿಲ್ಟರ್ ವಾಟರನ್ನು ಸಪ್ಲೈ ಮಾಡುತ್ತೇವೆಂದರೆ Itisanimpossiblethingಆದ್ದರಿಂದ ಪ್ರೊ.ನಂಜುಂಡಸ್ವಾಮಿಯವರು ಹೇಳಿದ ಹಾಗೆ We must have dull system. ಏನು ವೇಸ್ಟ್ ವಾಟರ್ ಹೋಗುತ್ತದೆ ಅದನ್ನು ರಿಸೈಕ್ಲಿಂಗ್ ಮಾಡಿ, ಪ್ಯೂರಿಫೈಮಾಡಿ ಬೇರೊಂದು ಪೈಪ್‌ನಲ್ಲಿ ಸಪ್ಲೈ ಮಾಡಿದರೆ ನೂರಾರು ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಈ

ವಾಟರ್ ಪ್ರಾಬ್ಲಮ್‌ನ್ನು ಸಾಲ್ವ್ ಮಾಡುವುದಕ್ಕೂ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರೂರಲ್ ವಾಟರ್ ಸಪ್ಲೈ ಬಗ್ಗೆ ಹೇಳುವುದಾದರೆ, ಇಲ್ಲಿಯವರೆಗೆ ಹಳ್ಳಿಗಳಲ್ಲಿ ನೀರನ್ನು ಒದಗಿಸತಕ್ಕಂಥ ವ್ಯವಸ್ಥೆ ಏನೋ ನಡೆದಿದೆ. ಆದರೆ ಬೋರ್‌ವೆಲ್‌ಗಳನ್ನು ಕೊರೆಸತಕ್ಕಂಥದ್ದರಲ್ಲಿ ಹಿಂದೆ ಸರಿಯಾದ ರೀತಿಯಲ್ಲಿ ಮ್ಯಾನೇಜ್‌ಮೆಂಟ್ ಮಾಡದೆ ಇದ್ದುದರಿಂದ ಸರಿಯಾದ ರೀತಿಯಲ್ಲಿ ನೀರಿನ ವ್ಯವಸ್ಥೆಯಾಗಿಲ್ಲ. ಈಗ ಮಂಡಲ್ ಪಂಚಾಯತಿ ಇದರ ಉಸ್ತುವಾರಿ. ನೋಡಿಕೊಳ್ಳಬೇಕಾಗಿದೆ, ಜಿಲ್ಲಾಪರಿಷತ್ ನೀರಿನ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದೆ. ಆದರೆ ಮೇಜರ್ ವಾಟರ್ ಸಪ್ಲೈ ಇರತಕ್ಕಂಥ ಸಂದರ್ಬದಲ್ಲಿ ಮೋಟಾರ್ ಕೆಟ್ಟುಹೋದರೆ ಅವರ ಹತ್ತಿರ ಹಣವಿರುವುದಿಲ್ಲ. ಅದನ್ನು ರೀಪ್ಲೇಸ್ ಮಾಡುವುದಿಲ್ಲ. ಆರು ತಿಂಗಳಾದರೂ ಕೂಡ ಮೇಜರ್ ವಾಟರ್ ಸಪ್ಲೈ ಇರತಕ್ಕಂಥ ಊರುಗಳಲ್ಲಿ ಮತ್ತೆ ಮೋಟಾರ್‌ಗಳನ್ನು ಅಳವಡಿಸಿ ಪಂಪ್ ಮಾಡತಕ್ಕಂಥ ಶಕ್ತಿಯನ್ನು ಅವರು ಪಡೆದಿಲ್ಲ. ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಿನಿವಾಟರ್ ಸಪ್ಲೈನಲ್ಲಿ ಬೋರ್‌ವೆಲ್‌ಗಳನ್ನು ತೆಗೆಯತಕ್ಕಂಥ ಸಂದರ್ಭದಲ್ಲಿ ಬಹಳಷ್ಟು ಡಿಫೆಕ್ಟ್ಸ್ ಇವೆ. ಏಕೆಂದರೆ, ಮಂಡಲ್‌ಪಂಚಾಯಿತ್, ಜಿಲ್ಲಾಪರಿಷತ್ ಮತ್ತು ಗೌವರ್ನಮೆಂಟ್ ಹೀಗೆ ಎಲ್ಲದರಲ್ಲೂ ಬಹಳಷ್ಟು ನ್ಯೂನತೆ ಇರುವುದರಿಂದ ಅದು ಸರಿಹೋಗಬೇಕಾದರೆ ಯಾರಿಗಾದರೂ ಒಬ್ಬರಿಗೆ ಜವಾಬ್ದಾರಿಯನ್ನು ವಹಿಸತಕ್ಕಂಥ ಕೆಲಸ ನಡೆದರೆ ಹಳ್ಳಿಗಾಡುಗಳಲ್ಲಿ ಈಗ ಮಾಡಿರತಕ್ಕಂಥ ನೀರಿನ ವ್ಯವಸ್ಥೆ ಸರಿಯಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಪಂಚಸೂತ್ರವೆಂದು ಇದೆ. ನಾನು ಇದನ್ನು ನಿಜಕ್ಕೂ ಕೂಡ ಮೆಚ್ಚುತ್ತೇನೆ. ನಮ್ಮ ಮುಖ್ಯಮಂತ್ರಿಗಳನ್ನು, ನಮ್ಮ ಸರ್ಕಾರದವರನ್ನು ಅಭಿನಂದಿಸುತ್ತೇನೆ. ಆದರೆ ಇದು ಎಷ್ಟರಮಟ್ಟಿಗೆ...

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಂಜಪ್ಪನವರು ಹೊಗಳಿ ಹೊಗಳಿ ಹೊನ್ನಶೂಲಕ್ಕೆ ಏರಿಸುತ್ತಿದ್ದಾರೆ.

ಡಾ. ಎನ್.ಬಿ. ನಂಜಪ್ಪ : ಈಗ ನಾನು ಒಂದು ಮಾತನ್ನು ಹೇಳುವುದಾದರೆ ಅಡ್ಮಿನಿಸ್ಟ್ರೇಷನ್ has been let loose since eight years. ಪೀವನ್‌ನಿಂದ ಹಿಡಿದು ಎಲ್ಲಿಯವರೆಗೆ ಹೇಳಬೇಕೆನ್ನುವುದು ನನಗಂತೂ ಗೊತ್ತಾಗುವುದಿಲ್ಲ. ಇದು ಅಲ್ಲಿಯವರೆಗೆ ಕೆಟ್ಟು ಹೋಗಿದೆ. ಇದು ಸರಿಹೋಗಬೇಕು. ಇದು ಸರಿ ಹೋಗಬೇಕಾದರೆ, ಕೆಳಮಟ್ಟ ಎಂದು ಹೇಳಬಾರದಲ್ಲ, ಹೇಳಿದರೆ ನಿಮಗೆ ಕೋಪ ಬರುತ್ತದೆ. from below all upwards.

ಶ್ರೀ ವಾಟಾಳ್ ನಾಗರಾಜ್ : ಫ್ರಮ್ ಬಿಲೋ ಎಂದು ಮಾನ್ಯ ಸದಸ್ಯರು ಹೇಳಿದರು. ಅದೇನು ಎನ್ನುವುದು ನನಗೆ ಅರ್ಥವಾಗುವುದಿಲ್ಲ.

ಡಾ. ಎನ್.ಬಿ. ನಂಜಪ್ಪ : ಎಣ್ಣೆ, ಸೋಪು, ಸಿಗೆಕಾಯಿ, ಮೈಸೂರು ಸ್ಯಾಂಡಲ್. ಡಿಟರ್‌ಜಂಟ್ ಅದೆಲ್ಲವನ್ನು ಉಪಯೋಗಮಾಡಿದರೂ ಕೂಡ ಬಹಳ ಕಷ್ಟವೆಂದು ನನಗನಿಸುತ್ತದೆ. ಈ ಪಂಚಶೀಲ ಸರಿಯಾದ ರೀತಿಯಲ್ಲಿ ಅಸ್ತಿತ್ವಕ್ಕೆ ಬರಬೇಕಾದರೆ...

ಶ್ರೀ ವಾಟಾಳ್ ನಾಗರಾಜ್ : ಪಂಚಶೀಲವೋ, ಪಂಚಸೂತ್ರವೋ ?

ಡಾ: ಎನ್.ಬಿ. ನಂಜಪ್ಪ : ಇದು ಪಂಚಸೂತ್ರ ಅಥವಾ ಪಂಚಶೀಲ. ಅಷ್ಟ ಮದಗಳು ಇವೆಯಲ್ಲ ಅದೇರೀತಿ ಇದು ಪಂಚಶೀಲ. ಇದು ಸರಿಹೋಗಬೇಕು ಎನ್ನುವುದಾದರೆ, every individual of this country, not only an officer or a peon, or an higher officer or IAS officer, every citizen of this country must become

principled. You must have some principle in life. Then only you can rectify this. Not with any other thing; not by slogans; not by any other circulars.

ಪ್ರತಿಯೊಬ್ಬರೂ ಕೂಡ ಅವರವರ ಜವಾಬ್ದಾರಿ ಅರಿತು ಕೆಲಸ ಮಾಡತಕ್ಕ ವ್ಯವಸ್ಥೆ ಬಂದ ದಿವಸ ಮಾತ್ರ ಇದನ್ನು ಸರಿ ಮಾಡುವುದಕ್ಕೆ ಸಾಧ್ಯವೆಂದು ಹೇಳಿ, ಈ ಸಂದರ್ಭದಲ್ಲಿ ನಮ್ಮ ಸರ್ಕಾರವನ್ನು ಮತ್ತು ಮಾನ್ಯ ರಾಜ್ಯಪಾಲರನ್ನು ಅಭಿನಂದಿಸಿ, ಅವರು ಈ ಒಂದು ಒಳ್ಳೆಯ ವರದಿಯನ್ನು ಏನು ತಯಾರಿಸಿದ್ದಾರೆ ಇದು ಚೆನ್ನಾಗಿ ಅಸ್ತಿತ್ವಕ್ಕೆ ಬಂದು ನಮ್ಮ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಸಹಾಯಕವಾಗಲಿ, ಮತ್ತು 7-8 ವರ್ಷಗಳಿಂದ ಏನು ಕೆಲಸ ಸ್ಥಗಿತವಾಗಿತ್ತು ಅದು ಪ್ರಾರಂಭವಾಗಲಿ, ಪ್ರಾರಂಭವಾಗಿ ಕರ್ನಾಟಕದ ಜನತೆಗೆ ನಿಟ್ಟುಸಿರು ಬಿಡತಕ್ಕ ವ್ಯವಸ್ಥೆಯಾಗಲಿ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

ಉಪಾಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ, ನಾಳೆ ಬೆಳಿಗ್ಗೆ 11ಗಂಟೆಗೆ ಮತ್ತೆ ಸೇರುತ್ತದೆ.

(ಸದನವು ಸಂಜೆ 6 ಗಂಟೆ 22 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 14ನೇ ಮಾರ್ಚ್ 1991ರ ಗುರುವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)